## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1813 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ). |
| ಉತ್ತರಿಸಬೇಕಾದ ದಿನಾಂಕ | 23/03/2026 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರು ಮಾರ್ಚ್ 11ರಿಂದ ಮಾರ್ಚ್ 15ರವರೆಗೆ ಓ.ಪಿ.ಡಿ. ಸೇವೆಗಳನ್ನು ಬಂದ್ ಮಾಡಿ ಮುಷ್ಕರ ಮಾಡುವ ಬಗ್ಗೆ ಸರ್ಕಾರಕ್ಕೆ ನೋಟೀಸ್ ನೀಡಿರುವುದು ನಿಜವೇ; (ಹಾಗಿದ್ದಲ್ಲಿ, ಅವರ ಪ್ರಮುಖ ಬೇಡಿಕೆಗಳ ಕುರಿತು ಮಾಹಿತಿ ಒದಗಿಸುವುದು); | ಹೌದು<br><br>ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಕೇಂದ್ರ ಸಂಘ, ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಹಾಗೂ ಇಲಾಖೆಯ ಎಲ್ಲಾ ವೃಂದ ಸಂಘಗಳು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ನೀಡಿರುವ ಮನವಿಯನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| ಆ) | ಸರ್ಕಾರಿ ವೈದ್ಯರುಗಳ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು). | ಸಂಘದವರ ಬೇಡಿಕೆಗಳ ಕುರಿತು ಆರೋಗ್ಯ ಇಲಾಖೆಯ ವತಿಯಿಂದ ಏನೇನು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂಬುದರ ಕುರಿತು ಅವರುಗಳಿಗೆ ಪತ್ರ ಮುಖಾಂತರ ತಿಳಿಸಲಾಗಿತ್ತು. ಸದರಿ ಪತ್ರವನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ. |
| ಇ) | ವೈದ್ಯರುಗಳು ಮುಷ್ಕರ ನಡೆಸುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಸಂಘಟನೆ ಪದಾಧಿಕಾರಿಗಳ ಜೊತೆ ಸಮಾಲೋಚನೆ ಸಭೆ ನಡೆಸಿದೆಯೇ; ಹಾಗಿದ್ದಲ್ಲಿ, ಆ ಸಭೆಯಲ್ಲಿ ಯಾವುದಾದರೂ ಒಪ್ಪಂದಕ್ಕೆ ಬರಲಾಗಿದೆಯೇ; (ಮಾಹಿತಿ ಒದಗಿಸುವುದು); | ಮುಂದುವರೆದು ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉಪಸ್ಥಿತಿಯಲ್ಲಿ ರಾಜ್ಯಾಧ್ಯಕ್ಷರು, ಕರ್ನಾಟಕ ಸರ್ಕಾರಿ ನೌಕರರ ಸಂಘ ಹಾಗೂ ಆರೋಗ್ಯ ಇಲಾಖೆಯ ವಿವಿಧ ವೃಂದದ ಸಂಘಗಳ ಪ್ರತಿನಿಧಿಗಳೊಂದಿಗೆ ದಿನಾಂಕ : 10/03/2026 ರಂದು ಸಭೆ ನಡೆಸಲಾಗಿದ್ದು, ಸಭೆಯ ನಡವಳಿಯನ್ನು **ಅನುಬಂಧ-3**ರಲ್ಲಿ ನೀಡಲಾಗಿದೆ.<br><br>ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಕ್ರಮವಹಿಸಲು ಪರಿಶೀಲಿಸಲಾಗುತ್ತಿದೆ. |

| | | |
|---|---|---|
| ಈ) | ಪ್ರಾಥಮಿಕ ಆರೋಗ್ಯ ಕೇಂದ್ರ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಿಗೆ ಎಷ್ಟು ಸಂಖ್ಯೆಯಲ್ಲಿ ಹಾಗೂ ನಿಗದಿತ ಅವಧಿಯಲ್ಲಿ ಡ್ರಗ್ಸ್‌ಗಳನ್ನು ಒದಗಿಸಬೇಕಾಗಿತ್ತು ಅಷ್ಟು ಒದಗಿಸಿರುವುದಿಲ್ಲವೆಂಬ ಆರೋಪ ಇರುವುದು ನಿಜವೇ; (ವಿವರ ನೀಡುವುದು). | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಭೆಗಳಲ್ಲಿ ಈ ಬಗ್ಗೆ ಚರ್ಚಿಸಿದಾಗ ಜಿಲ್ಲಾ ಆಸ್ಪತ್ರೆಗಳಲ್ಲಿ ಯಾವುದೇ ರೀತಿಯ ಔಷಧಿಗಳ ಕೊರತೆ ಇರುವ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸಭೆಯ ಗಮನಕ್ಕೆ ತಂದಿರುವುದಿಲ್ಲ, ಹಾಗೂ ಔಷಧ ಕೊರತೆ ಇರುವ ಕುರಿತು ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ.<br>ಕಾಲಕಾಲಕ್ಕೆ ಇ-ಔಷಧಿ ತಂತ್ರಾಂಶದಲ್ಲಿ ಔಷಧಿ ದಾಸ್ತಾನುಗಳನ್ನು ಅಳಡಿಸದೇ ಇರುವುದರಿಂದ ಆಸ್ಪತ್ರೆಗಳಿಗೆ ಸರಿಯಾದ ಸಮಯದಲ್ಲಿ ಔಷಧಿ ಸರಬರಾಜು ಮಾಡಲು ಅಡಚಣೆ ಉಂಟಾಗಿರುತ್ತದೆ. ಇದನ್ನು ಸರಿಪಡಿಸಲು ಇಲಾಖೆಯ ಎಲ್ಲಾ ಆಸ್ಪತ್ರೆಗಳ ವೈದ್ಯರುಗಳಿಗೆ ಸೂಚಿಸಲಾಗಿರುತ್ತದೆ.<br><br>ಅವಶ್ಯಕ ಔಷಧಗಳನ್ನು ಒದಗಿಸಿಕೊಳ್ಳಲು ಆಯಾ ಆಸ್ಪತ್ರೆಗಳ Ab-Ark/ARS ಅಡಿಯಲ್ಲಿ ಅನುದಾನ ಲಭ್ಯವಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಅಗತ್ಯ ಕ್ರಮಹಿಸಲು ಸೂಚಿಸಲಾಗಿದೆ. ಅಲ್ಲದೇ, ರೂ.30.00ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ರಾಜ್ಯ ಸರ್ಕಾರದ ವತಿಯಿಂದ ಕೇಂದ್ರ ಸರ್ಕಾರದ ಯೋಜನೆಗಳಾದ NFDS ಮತ್ತು JSS ರಲ್ಲಿ ಕೊರತೆಯನ್ನು ಸರಿದೂಗಿಸಲು ಬಿಡುಗಡೆ ಮಾಡಲಾಗಿರುತ್ತದೆ.<br><br>ಆದ್ದರಿಂದ ಈ ಆರೋಪದಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ. |

HFW/23/HSD/2026)

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ (ರಿ) ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಕೇಂದ್ರ ಸಂಘ (ರಿ)

ಹಾಗೂ ಇಲಾಖೆಯ ಎಲ್ಲಾ ವೃಂದ ಸಂಘಗಳು. ಬೆಂಗಳೂರು

---

ದಿನಾಂಕ: 13-02-2026

ಇವರಿಗೆ,
ಮಾನ್ಯ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ/ನೌಕರರ ಬೇಡಿಕೆಗಳನ್ನು ಈಡೇರಿಸುವಲ್ಲಿ ಇಲಾಖೆಯ ಅಧಿಕಾರಿಗಳು ವಿಫಲರಾಗಿರುವುರಿಂದ ಅನಿವಾರ್ಯವಾಗಿ ಅನಿರ್ದಿಷ್ಟಾವಧಿ ಮುಷ್ಕರ ಕೈಗೊಳ್ಳುವ ಬಗ್ಗೆ ತಿಳುವಳಿಕೆ ಪತ್ರ

ಉಲ್ಲೇಖ:

1. ಕರ್ನಾಟಕ ವೈದ್ಯಾಧಿಕಾರಿಗಳ ಸಂಘ ಮಾನ್ಯ ಆರೋಗ್ಯ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಬೇಡಿಕೆಗಳಿಗೆ ಸಂಬಂಧಿಸಿದಂತೆ ನಡೆಸಿದ ಸಭೆಯ ದಿನಾಂಕಗಳು: 03.09.2023, 05.10.2023, 03.01.2024, 19.06.2024, 30.10.2024, 05.05.2025 ಹಾಗೂ 29.10.2025
2. ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಸಂಘ ಇವರು ಆರೋಗ್ಯ ಸಚಿವರು ಹಾಗೂ ಅಧಿಕಾರಿಗಳೊಂದಿಗ ಬೇಡಿಕೆಗಳಿಗೆ ಸಂಬಂಧಿಸಿದಂತೆ ನಡೆಸಿದ ಸಭೆಯ ದಿನಾಂಕಗಳು: 27-09-2023, 19-06-2024, 28-01-2025, 23-05-2025, 05-11-2025, 19-01-2026 ಹಾಗೂ 05-02-2026.
3. ದಿನಾಂಕ:13-02-2026ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಒಟ್ಟು 36397 ಅಧಿಕಾರಿ/ನೌಕರರು ಕಾರ್ಯ ನಿರ್ವಹಿಸುತ್ತಿದ್ದು, ರಾಜ್ಯದ 6 ಕೋಟಿ ಜನಸಂಖ್ಯೆಗೆ ಆರೋಗ್ಯ ಸೇವೆಯನ್ನು ಒದಗಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದು, ಪ್ರಸ್ತುತ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ನೌಕರರ ಸಂಖ್ಯೆ, ವಯೋನಿವೃತ್ತಿ ಮತ್ತು ಇತರೆ ಕಾರಣಗಳಿಂದಾಗಿ ಕಡಿಮೆಯಾಗುತ್ತಿದ್ದು, ಖಾಲಿ ಹುದ್ದೆಗಳ ಭರ್ತಿ

ಆಗದೇ ಇರುವುದರಿಂದ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ–ನೌಕರರ ಮೇಲೆ ಹೆಚ್ಚಿನ ಕಾರ್ಯ ಒತ್ತಡ ಉಂಟಾಗುತ್ತಿದ್ದು, ಆದಗ್ಯೂ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಹಾಗೂ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ವಿವಿಧ ವೃಂದಗಳ ಕೇಂದ್ರ ಸಂಘವು ಉಲ್ಲೇಖಿತ 1 ಮತ್ತು 2 ರಂತೆ ಇಲಾಖಾ ಸಚಿವರು ಹಾಗೂ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಹಲವಾರು ಬಾರಿ ಸಭೆಗಳನ್ನು ನಡೆಸಿ ಸಕಾರಾತ್ಮಕ ಸಲಹೆಗಳನ್ನು ನೀಡಿದ್ದರೂ ಸಹ ಅವುಗಳನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ. ಅಲ್ಲದೇ ಇಲಾಖೆ ಮುಖ್ಯಸ್ಥರ ಅಧ್ಯಕ್ಷತೆಯಲ್ಲಿ ನಡೆದ ಕೆಲವು ಸಭೆಗಳ ಸಭಾ ನಡವಳಿಗಳನ್ನು ಸಹ ದಾಖಲಿಸದೇ ಇಲಾಖೆಯ ಅಧಿಕಾರಿ–ನೌಕರರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ನಿರ್ಲಕ್ಷ್ಯವಹಿಸುತ್ತಿದ್ದಾರೆ ಎಂಬುದು ಅಧಿಕಾರಿ–ನೌಕರರ ಅಭಿಪ್ರಾಯವಾಗಿದೆ.

## ಇಲಾಖೆಯ ಅಧಿಕಾರಿ – ನೌಕರರ ಪ್ರಮುಖ ಬೇಡಿಕೆಗಳು

1. **ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ::-**

   ಸುಮಾರು 4 ವರ್ಷಗಳಿಂದ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿಗಾಗಿ ಹಲವಾರು ಬಾರಿ ಮೌಖಿಕವಾಗಿ ಹಾಗೂ ಲಿಖಿತವಾಗಿ ಮನವಿ ಸಲ್ಲಿಸಿದ್ದರೂ ಇದುವರೆವಿಗೂ ಕಾರ್ಯಗತವಾಗಿಲ್ಲ.

2. **ಎಲ್ಲಾ ವೃಂದಗಳ ಜೇಷ್ಠತಾಪಟ್ಟಿಯನ್ನು ಪ್ರಕಟಿಸುವುದು. ::-**

   ವೈದ್ಯರು ಹಾಗೂ ಇತರ ವೃಂದಗಳ ಜೇಷ್ಠತಾಪಟ್ಟಿ ಪ್ರತಿವರ್ಷ ಡಿಸೆಂಬರ್ ಮಾಹೆಯಲ್ಲಿ ಪರಿಷ್ಕರಿಸಬೇಕೆಂಬ ನಿಯಮವಿದ್ದರೂ ಇಲಾಖೆ ಸುಮಾರು 13 ವರ್ಷಗಳಿಂದ ಪರಿಷ್ಕರಿಸಿರುವುದಿಲ್ಲ. ಈ ಕೂಡಲೇ ಪರಿಷ್ಕರಿಸಿ ಪ್ರಚುರ ಪಡಿಸಲು ಸಂಘವು ಆಗ್ರಹಿಸುತ್ತದೆ.

3. **ಎಲ್ಲಾ ವೃಂದಗಳ ಮುಂಬಡ್ತಿ. ::-**

   ಇಲಾಖೆಯ ವೈದ್ಯರು ಹಾಗೂ ಇತರೆ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿ ಪರಿಷ್ಕರಿಸದೇ ಇರುವುದರಿಂದ ಅರ್ಹತೆ ಹೊಂದಿರುವ ಹಿರಿಯ ವೈದ್ಯರು ಮತ್ತು ಇತರೆ ವೃಂದಗಳ ಅಧಿಕಾರಿ–ನೌಕರರು ಮುಂಬಡ್ತಿ ಹುದ್ದೆಗಳನ್ನು ಪಡೆಯಲು ವಂಚಿತರಾಗಿರುತ್ತಾರೆ. ಹಾಗೂ ಯಾವುದೇ ಮುಂಬಡ್ತಿ ಇಲ್ಲದೆ ಹಲವಾರು ನೌಕರರ ವಯೋನಿವೃತ್ತಿ ಹೊಂದಿರುತ್ತಾರೆ.

**4. ಸೇವಾನಿರತ ನೌಕರರ ಉನ್ನತ ವ್ಯಾಸಂಗ. ::-**

ಆರೋಗ್ಯ ಇಲಾಖೆಯಲ್ಲಿ ಸೇವಾನಿರತ ಕೋಟಾದಡಿಯಲ್ಲಿ ಈ ಹಿಂದಿನಿಂದಲೂ ಉನ್ನತ ವ್ಯಾಸಂಗ/ಸ್ನಾತಕೋತ್ತರ ವ್ಯಾಸಂಗಕ್ಕೆ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ವೇತನ, ಶುಲ್ಕ ಹಾಗೂ ಭತ್ಯೆಗಳೊಂದಿಗೆ ನಿಯೋಜನೆ ಮಾಡುವ ನಿಯಮವಿದೆ. ಆದರೆ ಈ ಸಾಲಿನಿಂದ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ನಿಯೋಜನೆಗೊಂಡ ವೈದ್ಯರುಗಳಿಗೆ ವೇತನ, ಶುಲ್ಕ ಹಾಗೂ ಭತ್ಯೆಗಳನ್ನು ನೀಡಿರುವುದಿಲ್ಲ ಹಾಗೂ ಇತರೆ ವೃಂದದ ಸಿಬ್ಬಂದಿಗಳ ಉನ್ನತ ವ್ಯಾಸಂಗದ ನಿಯೋಜನೆಯನ್ನು ಸಂಪೂರ್ಣವಾಗಿ ನಿಲ್ಲಿಸಿರುತ್ತಾರೆ. ಆದರೆ ಸರ್ಕಾರದ ಇತರೆ ಆರೋಗ್ಯ ಸಂಸ್ಥೆಗಳಾದ ವೈದ್ಯಕೀಯ ಶಿಕ್ಷಣ, ESI, ಸ್ವಾಯತ್ತ ಸಂಸ್ಥೆಗಳಲ್ಲಿನ ವೈದ್ಯರುಗಳಿಗೆ ಈ ಅವಕಾಶವಿದೆ. ಆಕುಕ ಇಲಾಖೆಯ ವೈದ್ಯರು ಹಾಗೂ ಇಲಾಖೆಯ ಇತರೆ ವೃಂದದ ಸಿಬ್ಬಂದಿಯವರು ಈ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಇದು ನಮ್ಮ ಮೂಲಭೂತ ಹಕ್ಕನ್ನು ಕಸಿದುಕೊಂಡಂತಾಗಿದೆ.

**5. ವರ್ಗಾವಣೆ ಕಾಯ್ದೆಗೆ ಮಾರ್ಪಾಡು. ::-**

ವರ್ಗಾವಣೆ ಕಾಯ್ದೆಗೆ ಮಾರ್ಪಾಡುಗಳನ್ನು ಮಾಡುವಂತೆ ಹಲವು ಬಾರಿ ವೈದ್ಯಾಧಿಕಾರಿಗಳ ಸಂಘ ಮತ್ತು ವಿವಿಧ ವೃಂದದ ಕೇಂದ್ರ ಸಂಘವು ಮನವಿ ಸಲ್ಲಿಸಿದ್ದರೂ, ಇದನ್ನು ಪರಿಗಣಿಸದೇ, ಸರ್ಕಾರವು ವರ್ಗಾವಣೆ ಪ್ರಕ್ರಿಯೆಯನ್ನು ವರ್ಷ ಪೂರ್ತಿ ಮಾಡುತ್ತಿದೆ.

**6. ಜಿಲ್ಲಾಸ್ಪತ್ರೆ / ಸ್ವಾಯತ್ತ ಸಂಸ್ಥೆಗಳ ಹುದ್ದೆಗಳು. ::-**

ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಹೊಂದಿಕೊಂಡಿರುವ ಜಿಲ್ಲಾ ಆಸ್ಪತ್ರೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ N Cadre ಹುದ್ದೆಗಳಿದ್ದು, ಆ ಹುದ್ದೆಗಳಿಗೆ ಆಕುಕ ಇಲಾಖೆಯಿಂದ ವರ್ಗಾವಣೆ ಮಾಡದೇ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು/ಸಿಬ್ಬಂದಿಗಳನ್ನು ಜಿಲ್ಲಾಸ್ಪತ್ರೆಗಳಿಂದ ವಾಪಸ್ಸು ಪಡೆಯುತ್ತಿದ್ದಾರೆ. ಇದರಿಂದ ನುರಿತ ಹಿರಿಯ ವೈದ್ಯರು ಹಾಗೂ ಸಿಬ್ಬಂದಿಗಳು ಗ್ರಾಮೀಣ ಮತ್ತು ತಾಲ್ಲೂಕು ಮಟ್ಟಕ್ಕೆ ಮಾತ್ರ ಸೀಮಿತಗೊಂಡು ಜಿಲ್ಲಾಮಟ್ಟದಲ್ಲಿ ಸೇವೆ ಸಲ್ಲಿಸುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ.

**7. ಸಮರ್ಪಕ ಔಷಧಿ ಪೂರೈಕೆ. ::-**

ಆಸ್ಪತ್ರೆಗಳಲ್ಲಿ ಕಾಲಕಾಲಕ್ಕೆ ಸಮರ್ಪಕವಾದ ಔಷಧಿಗಳನ್ನು ಸರಬರಾಜು ಮಾಡುವುದು ಸರ್ಕಾರದ ಜವಾಬ್ದಾರಿಯಾಗಿದ್ದು, ಈ ಹಿನ್ನೆಲೆಯಲ್ಲಿ ಸರ್ಕಾರವು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ ಸಂಸ್ಥೆಯನ್ನು ಸ್ಥಾಪಿಸಿರುತ್ತದೆ. ಈ ನಿಗಮದ

ಪ್ರಮುಖ ಕರ್ತವ್ಯ ನಿಯಮಿತವಾಗಿ ಅಗತ್ಯಕ್ಕನುಗುಣವಾಗಿ ಔಷಧಿ ಮತ್ತು ವೈದ್ಯಕೀಯ ಸಲಕರಣೆಗಳನ್ನು ಸರಬರಾಜು ಮಾಡುವುದಾಗಿರುತ್ತದೆ. ಇತ್ತೀಚೆಗಿನ ದಿನಗಳಲ್ಲಿ ಔಷಧಿ ಸರಬರಾಜು ಮಾಡುದರಲ್ಲಿ ಸಂಸ್ಥೆಯು ಸಂಪೂರ್ಣ ವಿಫಲವಾಗಿರುವ ಕಾರಣ ರೋಗಿಗಳು ಸರಿಯಾದ ಸಮಯದಲ್ಲಿ ಔಷದೋಪಚಾರ ದೊರೆಯದೇ ಪರದಾಡುವಂತಾಗಿದೆ. ಇದರ ಬಗ್ಗೆ ಸಾಕಷ್ಟು ಬಾರಿ ಸಂಘವು ಮನವಿ ಮಾಡಿದರೂ ಇದುವರೆವಿಗೂ ಸರಿಪಡಿಸಿರುವುದಿಲ್ಲ. ಇದರಿಂದ ವೈದ್ಯರು ಮತ್ತು ಸಿಬ್ಬಂದಿಗಳ ಮೇಲೆ ಒತ್ತಡ ಹೆಚ್ಚಾಗುತ್ತಿದ್ದು ರೋಗಿಗಳ ಜೊತೆ ಸಂಘರ್ಷಗಳಿಗೆ ಎಡೆಮಾಡಿಕೊಟ್ಟಿದೆ. ರೋಗಿಗಳಿಗೆ ಸಮರ್ಪಕ ಔಷದೋಪಚಾರವನ್ನು ಮಾಡುವುದು ಕಷ್ಟಕರವಾಗಿರುತ್ತದೆ. ಸರ್ಕಾರವು ಲಭ್ಯವಿರುವ ಅನುದಾನದಲ್ಲಿ ಖರೀದಿಸಲು (AB-ArK) ತಿಳಿಸಿರುತ್ತಾರೆ. ಆದರೆ AB-ArK ಅನುದಾನ ತಾತ್ಕಾಲಿಕವಾಗಿ ತುರ್ತು ಸಂದರ್ಭದಲ್ಲಿ ಬಳಸಲು ಅವಕಾಶವಿದೆಯೇ ಹೊರತು ನಿರಂತರವಾಗಿ ಬಳಸಲು ಸಾಧ್ಯವಿಲ್ಲ. ಹಾಗೂ AB-ArK ಅನುದಾನವನ್ನು ಔಷಧಿ ಹೊರತು ಆಸ್ಪತ್ರೆಯ ಇತರೆ ಅಭಿವೃದ್ಧಿ ಹಾಗೂ ನಿರ್ವಹಣೆ ಕಾರ್ಯಗಳಿಗೂ ಬಳಸಬೇಕಾಗಿರುವುದರಿಂದ ಅನುದಾನದ ಕೊರತೆ ಉಂಟಾಗುತ್ತಿದೆ ಹಾಗೂ ಇತರ ಅಭಿವೃದ್ಧಿ ಕಾರ್ಯ ಕುಂಠಿತವಾಗಿರುತ್ತದೆ. ಇದರಿಂದಾಗಿ ಹಲವಾರು ಆಸ್ಪತ್ರೆಗಳಲ್ಲಿ ಕೋಟ್ಯಾಂತರ ರೂಪಾಯಿ ಪಾವತಿಗೆ ಬಾಕಿ ಇರುತ್ತದೆ.

**8. ಖಾಲಿ ಹುದ್ದೆಗಳ ನೇಮಕಾತಿ. ::-**

ಇಲಾಖೆಯಲ್ಲಿರುವ ವೈದ್ಯರು ಹಾಗೂ ಸಿಬ್ಬಂದಿಗಳ ಖಾಲಿ ಹುದ್ದೆಗಳನ್ನು ಕಾಲ ಕಾಲಕ್ಕೆ ಭರ್ತಿ ಮಾಡಿರುವುದಿಲ್ಲ. ಆರೋಗ್ಯ ಇಲಾಖೆಯಲ್ಲಿ 1998 ರಲ್ಲಿನ ಅಂಕಿ-ಅಂಶಗಳ ಆಧಾರದ ಮೇಲೆ ಹುದ್ದೆಗಳನ್ನು ಸೃಜಿಸಲಾಗಿತ್ತು. ತದನಂತರ ಜನಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದರೂ ಸಹ ಯಾವುದೇ ಹೊಸ ಹುದ್ದೆಗಳನ್ನು ಇದುವರೆವಿಗೂ ಸೃಜಿಸಿರುವುದಿಲ್ಲ. ಅಲ್ಲದೇ ಈ ಹಿಂದೆ ಸೃಜಿಸಿರುವ ಹುದ್ದೆಗಳಲ್ಲಿ ಶೇಕಡ 40% ಖಾಲಿ ಇದ್ದು, ಇದುವರೆವಿಗೂ ಭರ್ತಿ ಮಾಡಿರುವುದಿಲ್ಲ. ಇದರಿಂದ ವೈದ್ಯರು ಮತ್ತು ಸಿಬ್ಬಂದಿಗಳ ಮೇಲೆ ಅತೀವ ಕೆಲಸದ ಒತ್ತಡ ಉಂಟಾಗುತ್ತಿದೆ. ಆರೋಗ್ಯ ಇಲಾಖೆಯು ಸೇವಾ ಇಲಾಖೆಯಾಗಿದ್ದು, ಸಾರ್ವಜನಿಕರ ಜೊತೆ ನಿರಂತರ ಸಂಪರ್ಕವಿರುವ ಇಲಾಖೆಯಾಗಿದ್ದು, ಕಾಲಕಾಲಕ್ಕೆ ಹುದ್ದೆಗಳನ್ನು ಭರ್ತಿ ಮಾಡಿದರೆ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ನೀಡಬಹುದಾಗಿದೆ.

**9. ಎಂ.ಸಿ.ಹೆಚ್. ತಜ್ಞರ ಮರುಹೊಂದಾಣಿಕೆ. ::-**

ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಸಿಗುವ ನಿಟ್ಟಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಂತ ಹಂತವಾಗಿ ಸಮುದಾಯ ಆರೋಗ್ಯ

ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ. ಇಂತಹ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ MCH ತಜ್ಞ ವೈದ್ಯರುಗಳನ್ನು ಬೇರೆಡೆಗೆ ವರ್ಗಾವಣೆ ಮಾಡಲು ಆದೇಶಿಸಲಾಗಿದೆ. ಇದರಿಂದ ಗ್ರಾಮೀಣ ಭಾಗದ ಗರ್ಭಿಣಿ ಮಹಿಳೆಯರು ಹಾಗೂ ಮಕ್ಕಳು ದೂರದ ತಾಲ್ಲೂಕು/ಜಿಲ್ಲಾ ಕೇಂದ್ರಕ್ಕೆ ಪ್ರಯಾಣ ಬೆಳೆಸಿ ತಜ್ಞ ವೈದ್ಯರುಗಳ ಸೇವೆಯನ್ನು ಪಡೆಯುವುದು ಕಷ್ಟವಾಗುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ತಾಯಿ ಮರಣ/ಶಿಶು ಮರಣ ಪ್ರಮಾಣ ಹೆಚ್ಚಾಗುವ ಆತಂಕವಿರುತ್ತದೆ ಹಾಗೂ ಇತರೆ ತಜ್ಞ ಸೇವೆಗಳಿಗೂ ತೊಂದರೆಯಾಗಲಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತುತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಸಂಸ್ಥೆಗಳನ್ನು ಮುಚ್ಚುತ್ತಿರುವುದು ಹಾಗೂ ಹುದ್ದೆಗಳನ್ನು ಬೇರೆ ಕಡೆಗೆ ವರ್ಗಾಯಿಸುತ್ತಿರುವುದರಿಂದ ಸ್ಥಳೀಯ ರೋಗಿಗಳು ಪರದಾಡುವಂತಹ ವಾತಾವರಣ ನಿರ್ಮಾಣವಾಗಿದೆ

## 10. ನಿಯೋಜನೆ ಹುದ್ದೆಗಳು ::-

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೀಮಿತವಾದ ತಾಂತ್ರಿಕ ಹುದ್ದೆಗಳಾದ ರಾಜ್ಯದ ಮಹಾನಗರ ಪಾಲಿಕೆಯ ಕೆಲವು ಹುದ್ದೆಗಳು, ಆಹಾರ ಸುರಕ್ಷತೆ ಮತ್ತು ಗುಣಮಟ್ಟ, ಕರ್ನಾಟಕ ರಾಜ್ಯ ವೈದ್ಯಕೀಯ ಔಷಧ ಸರಬರಾಜು ನಿಗಮದ ವೈದ್ಯರು ಮತ್ತು ಇತರೆ ಸಿಬ್ಬಂದಿಗಳ ಹುದ್ದೆಯನ್ನು ತಾಂತ್ರಿಕ ಜ್ಞಾನದ ಅರಿವಿಲ್ಲದ ಅಧಿಕಾರಿಗಳಿಗೆ ನೀಡಲಾಗಿದ್ದು, ಇದರಿಂದ ಸದರಿ ಸಂಸ್ಥೆಗಳಲ್ಲಿ ಕಾರ್ಯವೈಖರಿ ಸಮರ್ಪಕವಾಗದೇ ಸಾರ್ವಜನಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಆದ್ದರಿಂದ ಈ ಹುದ್ದೆಗಳನ್ನು ಆಕುಕ ಇಲಾಖೆಯ ಅಧಿಕಾರಿ – ನೌಕರರನ್ನೇ ನಿಯೋಜಿಸಬೇಕು ಎಂದು ಸಂಘವು ಆಗ್ರಹಿಸುತ್ತದೆ.

## 11. ಗುತ್ತಿಗೆ ವೈದ್ಯರು ಹಾಗೂ ನೌಕರರ ಸಮಸ್ಯೆಗಳು. ::-

ಮಂಜೂರಾದ ಹುದ್ದೆಗಳಿಗೆ ಗುತ್ತಿಗೆ ವೈದ್ಯರು / ನೌಕರರ ನೇಮಕಾತಿ ಮಾಡಿಕೊಂಡು 3 ವರ್ಷ ಪೂರೈಸಿದ ಗುತ್ತಿಗೆ ವೈದ್ಯರು / ನೌಕರರನ್ನು ಖಾಯಂಗೊಳಿಸಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಸದರಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದ ಗುತ್ತಿಗೆ ವೈದ್ಯರು ಮತ್ತು ನೌಕರರು ಸೇವಾ ಭದ್ರತೆ ಇಲ್ಲದೇ ಅತಂತ್ರ ವಾತಾವರಣದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಈ ಹಿಂದಿನಂತೆ ಗುತ್ತಿಗೆ ವೈದ್ಯರು / ನೌಕರರನ್ನು ಖಾಯಂಗೊಳಿಸುವುದು. ಈಗಾಗಲೇ ಖಾಯಂಗೊಂಡ ಗುತ್ತಿಗೆ ವೈದ್ಯರಿಗೆ ಅವರು ಸಲ್ಲಿಸಿದ ಗುತ್ತಿಗೆ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸುವುದು. ಮುಂದುವರೆದು ನೇರ ನೇಮಕಾತಿ ಪ್ರಕ್ರಿಯೆಯ ಸಂದರ್ಭದಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು / ನೌಕರರು ಈ ಹಿಂದೆ ನೀಡಿದ ಹಾಗೆ ಗುತ್ತಿಗೆ ಸೇವೆಗೆ

ಕೃಪಾಂಕಗಳನ್ನು (ಪ್ರತಿ ಆರು ತಿಂಗಳ ಸೇವೆಗೆ 2.5% ಅಂಕಗಳು, ಗರಿಷ್ಠ 30% ಅಂಕಗಳವರೆಗೆ) ನೀಡುವಂತೆ ಸಂಘವು ಆಗ್ರಹಿಸುತ್ತದೆ.

**12.ಕರ್ತವ್ಯ ಅವಧಿ ನಂತರದ ಖಾಸಗಿ ವೈದ್ಯಕೀಯ ಸೇವೆ. ::-**

ಸರ್ಕಾರಿ ವೈದ್ಯರುಗಳು ಕರ್ತವ್ಯದ ಅವಧಿಯ ನಂತರ ಖಾಸಗಿ ಸೇವೆಯನ್ನು 1986 ರ ಆದೇಶದನ್ವಯ ನಡೆಸುತ್ತಿದ್ದಾರೆ. ಆದರೆ ಈಗ ಒಳರೋಗಿ/ಹೊರರೋಗಿ ಸೇವೆ ಎಂದು ವರ್ಗೀಕರಿಸಿ ಸರ್ಕಾರಿ ವೈದ್ಯರುಗಳು ಒಳರೋಗಿ ಸೇವೆಯನ್ನು ನೀಡಬಾರದು ಎಂದು ಆದೇಶವನ್ನು ಹೊರಡಿಸಲಾಗಿರುತ್ತದೆ. ಹೋಬಳಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ವೈದ್ಯರನ್ನು ಹೊರತುಪಡಿಸಿ ಬೇರೆ ಖಾಸಗಿ ತಜ್ಞ ವೈದ್ಯರು ಇರುವುದಿಲ್ಲ ಹಾಗೂ ಇದರಿಂದ ನುರಿತ ಶಸ್ತ್ರಚಿಕಿತ್ಸಕರ ಸೇವೆಯಿಂದ ಸಾರ್ವಜನಿಕರು ವಂಚಿತರಾಗುತ್ತಾರೆ (ಆಸ್ಪತ್ರೆಯ ಕರ್ತವ್ಯದ ವೇಳೆಯಲ್ಲಿ ಖಾಸಗಿ ಸೇವೆಯನ್ನು ನೀಡುವಂತ ವೈದ್ಯರಿಗೆ ಸಂಘವು ಯಾವುದೇ ಬೆಂಬಲವನ್ನು ವ್ಯಕ್ತಪಡಿಸುವುದಿಲ್ಲ). ಆದ್ದರಿಂದ ಸದರಿ ಆದೇಶವನ್ನು ಹಿಂಪಡೆಯುವಂತೆ ಸಂಘವು ಆಗ್ರಹಿಸುತ್ತದೆ. ಮುಂದುವರೆದು ಆಕುಕ ಇಲಾಖೆಯ ಸಿಬ್ಬಂದಿಗಳಿಗೆ ಇತರೆ ಆರೋಗ್ಯ ಸಂಸ್ಥೆಗಳಾದ ಕೇಂದ್ರ ಆರೋಗ್ಯ ಸೇವೆ/ವೈದ್ಯಕೀಯ ಶಿಕ್ಷಣ ಇಲಾಖೆ/ಕೇಂದ್ರ ESI Corporation ಸಿಬ್ಬಂದಿಗಳ ವೇತನಕ್ಕೆ ಹೋಲಿಸಿದರೆ ಬಹಳ ವೇತನ ತಾರತಮ್ಯವಿರುವ ಕಾರಣ ಸಂಘವು ಇಲಾಖೆಯ ಎಲ್ಲಾ ವೈದ್ಯರು ಮತ್ತು ಸಿಬ್ಬಂದಿಗಳಿಗೆ CGHS ಮಾದರಿ ವೇತನವನ್ನು ನೀಡಲು ಆಗ್ರಹಿಸುತ್ತದೆ.

**13.ವ್ಯತಿರಿಕ್ತ ಆದೇಶಗಳನ್ನು ಹಿಂಪಡೆಯುವುದು. ::-**

ಇತ್ತೀಚೆಗೆ ಸರ್ಕಾರಿ ವೈದ್ಯರು ಮತ್ತು ಆರೋಗ್ಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಗುರಿಯಾಗಿಸಿಕೊಂಡು ರಾತ್ರೋರಾತ್ರಿ ಏಕಪಕ್ಷೀಯವಾಗಿ ಆದೇಶಗಳನ್ನು ಹೊರಡಿಸುತ್ತಿದೆ. ಇಂತಹ ಆದೇಶಗಳು ಈಗಾಗಲೇ ಒತ್ತಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆರೋಗ್ಯ ಇಲಾಖೆಯ ಸಿಬ್ಬಂದಿಗಳ ಆತ್ಮಸ್ಥೈರ್ಯವನ್ನು ಕುಗ್ಗಿಸಿ, ಆತಂಕದ ವಾತಾವರಣವನ್ನು ಸೃಷ್ಟಿಸಿ, ಕರ್ತವ್ಯದ ಮೇಲೆ ಬಹಳಷ್ಟು ದುಷ್ಪರಿಣಾಮಗಳನ್ನು ಬೀರುತ್ತಿದೆ. ಆದ್ದರಿಂದ ಇಂತಹ ಆದೇಶಗಳನ್ನು ರದ್ದುಪಡಿಸುವುದು.

**14. ಇಲಾಖೆಯ ಅಧಿಕಾರಿ- ನೌಕರರಿಗೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಪ್ರಶಸ್ತಿ ಪ್ರಧಾನ.:-**

ರಾಜ್ಯದ ಕೆಲವು ಇಲಾಖೆಗಳಲ್ಲಿ ಉತ್ತಮ ಸೇವೆ ಸಲ್ಲಿಸುವ ಅಧಿಕಾರಿ ನೌಕರರಿಗೆ ಗುರುತಿಸಿ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಅದರಂತೆ ಆರೋಗ್ಯ ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸುವ ವೈದ್ಯರು ಹಾಗೂ ಅಧಿಕಾರಿ-ನೌಕರರನ್ನು ಗುರುತಿಸಿ ಸರ್ಕಾರವು ಪ್ರಶಸ್ತಿ ನೀಡುವುದು.

ಸರ್ಕಾರಿ ವೈದ್ಯರು ಹಾಗೂ ಇತರೆ ಸಿಬ್ಬಂದಿ ವರ್ಗದವರ ಪರಿಶ್ರಮದ ಫಲವಾಗಿ ದೇಶದಲ್ಲೇ ಕರ್ನಾಟಕ ರಾಜ್ಯವು ಆರೋಗ್ಯ ಸೂಚ್ಯಾಂಕ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ. Small Pox, ಪೋಲಿಯೋ, ಕೋವಿಡ್-19 ನಂತಹ ಮಾರಕ ಖಾಯಿಲೆಗಳನ್ನು ನಿರ್ಮೂಲನೆಗೊಳಿಸಿ, ಕ್ಷಯ ರೋಗ, ಕುಷ್ಠ ರೋಗ ಮತ್ತು ಇತ್ಯಾದಿ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಿ, ನಿರ್ಮೂಲನ ಹಂತಕ್ಕೆ ತರಲಾಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇವೆ.

ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಆದೇಶಗಳಿಂದ ಸರ್ಕಾರಿ ವೈದ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ಅನ್ಯಾಯವಾಗುತ್ತಿದ್ದು, ಇದರಿಂದ ಸಾರ್ವಜನಿಕರ ಆರೋಗ್ಯ ಸೇವೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಆದ ಕಾರಣ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ತಾವುಗಳು ಸಭೆಯನ್ನು ಕರೆಸಿ, ನಮ್ಮ ಸಮಸ್ಯೆಗಳನ್ನು ದಿನಾಂಕ 10.03.2026ರೊಳಗೆ ಇತ್ಯರ್ಥಗೊಳಿಸುವಂತೆ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಮತ್ತು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ವಿವಿಧ ವೃಂದಗಳ ಕೇಂದ್ರ ಸಂಘವು ಮನವಿ ಮಾಡುತ್ತದೆ.

**ಈ ಮೇಲ್ಕಂಡ ನಮ್ಮ ಬೇಡಿಕೆಗಳನ್ನು ನಿಗದಿತ ದಿನಾಂಕದಲ್ಲಿ ಈಡೇರಿಸಿದಿದ್ದಲ್ಲಿ ಇಲಾಖೆ ಎಲ್ಲಾ ವೃಂದ ಸಂಘಗಳ ಸಹಯೋಗದೊಂದಿಗೆ ಅನಿವಾರ್ಯವಾಗಿ ದಿನಾಂಕ: 11-03-2026ರಿಂದ ಅನಿರ್ದಿಷ್ಟಾವಧಿ ಮುಷ್ಕರವನ್ನು ಹಮ್ಮಿಕೊಳ್ಳಲಾಗುವುದು.**

- **ಅನಿರ್ದಿಷ್ಟಾವಧಿಯ ಮುಷ್ಕರದ ಮೊದಲ ಹಂತವಾಗಿ "ದಿನಾಂಕ: 11-03-2026 ರಿಂದ 15-03-2026 ರವರೆಗೆ ಹೊರರೋಗಿಗಳ ಸೇವೆಯನ್ನು ನಿಲ್ಲಿಸಿ, ತುರ್ತು ಸೇವೆಗಳನ್ನು ಮಾತ್ರ ನೀಡಲಾಗುವುದು"**
- **ಎರಡನೇ ಹಂತದಲ್ಲಿ "ದಿನಾಂಕ: 16-03-2026 ರಿಂದ ಬೇಡಿಕೆಗಳು ಈಡೇರುವ ವರೆಗೆ ಎಲ್ಲಾ ವೈದ್ಯರು, ಅಧಿಕಾರಿ – ನೌಕರರು ಕರ್ತವ್ಯಕ್ಕೆ ಗೈರಾಗುವುದು.**
- **ಅನಿರ್ದಿಷ್ಟಾವಧಿಯ ಮುಷ್ಕರದ ಕುರಿತು ಪ್ರಕಟಣೆಯನ್ನು ಸಾರ್ವಜನಿಕರಿಗೆ ನೀಡಲಾಗುವುದು.**

ಸರ್ಕಾರ ಮೇಲ್ಕಂಡ ಬೇಡಿಕೆಗಳನ್ನು ಕಾಲಮಿತಿಯೊಳಗೆ ಈಡೇರಿಸಿದಿದ್ದಲ್ಲಿ ಈ ಪತ್ರವನ್ನೇ ಅನಿರ್ಧಿಷ್ಟಾವಧಿ ಮುಷ್ಕರದ ತಿಳುವಳಿಕೆ ಪತ್ರವೆಂದು ಪರಿಗಣಿಸುವುದು.

ಡಾ॥ ರವೀಂದ್ರನಾಥ್ ಎಮ್. ಮೇಟಿ
ರಾಜ್ಯಾಧ್ಯಕ್ಷರು
ಕೆ.ಜಿ.ಎಂ.ಓ.ಎ

ಮಲ್ಲಿಕಾರ್ಜುನ ಬಿ ಬಳ್ಳಾರಿ
ರಾಜ್ಯಾಧ್ಯಕ್ಷರು
ಆರೋಗ್ಯ ಇಲಾಖೆ ಕೇಂದ್ರ ಸಂಘ

ಡಾ॥ ತಿಮ್ಮರಾಜು ಪಿ.ಆರ್.
ಕಾರ್ಯದರ್ಶಿ
ಕೆ.ಜಿ.ಎಂ.ಓ.ಎ

ಹೆಚ್ ಪುಟ್ಟರಾಜು
ಕಾರ್ಯದರ್ಶಿ
ಆರೋಗ್ಯ ಇಲಾಖೆ ಕೇಂದ್ರ ಸಂಘ

ಕಛೇರಿ : +91 80 2335 4039
+91 80 2335 4085
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂಖ್ಯೆ: E-2024012 ದಿನಾಂಕ: 26/02/2026

ಎಲ್ಲಾ ಮಾಧ್ಯಮ ಮುಖ್ಯಸ್ಥರಿಗೆ,

ದೃಶ್ಯ ಮಾಧ್ಯಮ/ಪತ್ರಿಕಾ ಪ್ರಕಾಶನಗಳು

ಮಾನ್ಯ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ಇವರಿಗೆ ದಿನಾಂಕ 15.02.2026 ರಂದು ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ (ನೋಂ), ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಕೇಂದ್ರ ಸಂಘ (ನೋಂ) ಹಾಗೂ ಇಲಾಖೆಯ ಎಲ್ಲಾ ವೃಂದ ಸಂಘಗಳು ಬೆಂಗಳೂರು ಇವರುಗಳು, ಬೇಡಿಕೆಗಳು ಇತ್ಯರ್ಥಗೊಳಿಸುವಂತೆ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

ಈ ಕುರಿತು ಇಲಾಖೆಯ ವತಿಯಿಂದ ಪ್ರತಿಕ್ರಿಯೆಯನ್ನು ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಲಾಗಿದ್ದು ಈ ವರದಿಯನ್ನು ಎಲ್ಲಾ ದೃಶ್ಯ ಮಾಧ್ಯಮ ಮತ್ತು ಪತ್ರಿಕಾ ಪ್ರಕಾಶನಗಳಲ್ಲಿ ಪ್ರಕಟಿಸಬೇಕೆಂದು ಕೋರಲಾಗಿದೆ.

**"ಮಾನ್ಯ ಪ್ರಧಾನ ಕಾರ್ಯದರ್ಶಿಯವರಿಂದ ಅನುಮೋದಿಸಲ್ಪಟ್ಟಿದೆ."**

**ಆಯುಕ್ತರು,**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,**
**ಆರೋಗ್ಯ ಸೌಧ, ಬೆಂಗಳೂರು**

# ಇಲಾಖೆಯ ಅಧಿಕಾರಿ-ನೌಕರರ ಬೇಡಿಕೆಗಳು

| ಕ್ರ.ಸಂ | ಬೇಡಿಕೆಗಳ ಪಟ್ಟಿ | ಪ್ರತ್ಯುತ್ತರ |
|---|---|---|
| 1 | **ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ::-**<br><br>ಸುಮಾರು 4 ವರ್ಷಗಳಿಂದ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿಗಾಗಿ ಹಲವಾರು ಬಾರಿ ಮೌಖಿಕವಾಗಿ ಹಾಗೂ ಲಿಖಿತವಾಗಿ ಮನವಿ ಸಲ್ಲಿಸಿದ್ದರೂ ಇದುವರೆವಿಗೂ ಕಾರ್ಯಗತವಾಗಿಲ್ಲ. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 200 ಕ್ಕೂ ಅಧಿಕ ವೃಂದಗಳಿದ್ದು ಗ್ರೂಪ್ ಎ,ಬಿ,ಸಿ ಮತ್ತು ಡಿ ವೃಂದಗಳ ವೃಂದ ಮತ್ತು ನೇಮಕಾತಿ ನಿಯಮಗಳು 1973 ರಿಂದ ಪರಿಷ್ಕರಣೆಗೊಂಡಿರುವದಿಲ್ಲ. ಸರ್ಕಾರದಿಂದ ಕಾಲಕಾಲಕ್ಕೆ **ಕಾರ್ಯನಿರ್ವಾಹಕ ಆದೇಶಗಳ (Executive orders)** ಮೂಲಕ ಸಿಬ್ಬಂದಿಗಳ ಅನುಕೂಲಕ್ಕಾಗಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.<br><br>ಪ್ರಸ್ತುತ ಎಲ್ಲಾ ವೃಂದದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸದರಿಯವರು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಆಕ್ಷೇಪಣೆ ವ್ಯಕ್ತಪಡಿಸಿ ಇಲಾಖೆಗೆ ಹಿಂದಿರುಗಿಸಿರುತ್ತಾರೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸೂಚನೆಯನ್ವಯ ಸೂಕ್ತ ಮಾರ್ಪಾಡುಗಳನ್ನು ಮಾಡಿ ಪುನಃ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿದೆ. ಶೀಘ್ರವಾಗಿ ಕ್ರಮವಹಿಸಲಾಗುವುದು.<br><br>50 ವರ್ಷಗಳ ನಂತರ ಇಲಾಖೆಯ ಎಲ್ಲಾ ವೃಂದದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಮಗ್ರವಾಗಿ ತಿದ್ದುಪಡಿ ಮಾಡುವ ಕಾರ್ಯ ಪ್ರಗತಿಯಲ್ಲಿದೆ. |
| 2 | **ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವುದು. ::-**<br><br>ವೈದ್ಯರು ಹಾಗೂ ಇತರ ವೃಂದಗಳ ಜೇಷ್ಠತಾಪಟ್ಟಿ ಪ್ರತಿ ವರ್ಷ ಡಿಸಂಬರ್ ಮಾಹೆಯಲ್ಲಿ ಪರಿಷ್ಕರಿಸಬೇಕೆಂಬ ನಿಯಮವಿದ್ದರೂ ಇಲಾಖೆ ಸುಮಾರು 13 **ವರ್ಷಗಳಿಂದ ಪರಿಷ್ಕರಿಸಿರುವುದಿಲ್ಲ. ಈ ಕೂಡಲೇ ಪರಿಷ್ಕರಿಸಿ ಪ್ರಚುರ ಪಡಿಸಲು** ಸಂಘವು ಆಗ್ರಹಿಸುತ್ತದೆ. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 2009 ರಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ವೃಂದದ ಜೇಷ್ಠತಾ ಪಟ್ಟಿ ಹಾಗೂ 2012 ರಲ್ಲಿ ಹಿರಿಯ ವೈದ್ಯಾಧಿಕಾರಿಗಳ ವೃಂದದ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಚುರಪಡಿಸಲಾಗಿರುತ್ತದೆ. ಇಲಾಖೆಯಲ್ಲಿ ವೈದ್ಯರ ವೃಂದದ ಸಮಗ್ರ ಮಾಹಿತಿಯು ಲಭ್ಯವಿಲ್ಲದ ಕಾರಣ ಜೇಷ್ಠತಾ ಪಟ್ಟಿ ಇಲ್ಲಿಯವರಗೂ ಅಂತಿಮಗೊಂಡಿರುವದಿಲ್ಲ<br><br>2024 ರಲ್ಲಿ ವೈದ್ಯರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಚುರಪಡಿಸಲಾಗಿದ್ದು, ಸದರಿ ಪಟ್ಟಿಗೆ ಆಕ್ಷೇಪಣೆಗಳು ಸ್ವೀಕೃತಿಯಾದ ಕಾರಣ, ವೈದ್ಯರ ಸಮಗ್ರ ಸೇವಾ ವಿವರದ ಮಾಹಿತಿಗಳು ಕೇಂದ್ರ ಕಛೇರಿಯಲ್ಲಿ ಲಭ್ಯವಿಲ್ಲದ ಕಾರಣ ಜೇಷ್ಠತಾ ಪಟ್ಟಿ ಅಂತಿಮಗೊಳಿಸಲು ವಿಳಂಬವಾಗಿರುತ್ತದೆ. ಸದರಿ ಮಾಹಿತಿಯನ್ನು ಜಿಲ್ಲೆಗಳಿಂದ ಪಡೆದು ಗಣಕೀಕರಣಗೊಳಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ಆದಾಗ್ಯೂ ಸಹಿತ ಸರ್ಕಾರದಿಂದ ಕಾಲಕಾಲಕ್ಕೆ **ಕಾರ್ಯನಿರ್ವಾಹಕ ಆದೇಶಗಳ (Executive orders)** ಹೊರಡಿಸಿ ಸಿಬ್ಬಂದಿಗಳ ಅನುಕೂಲಕ್ಕಾಗಿ ಎಲ್ಲಾ |

| | | |
|---|---|---|
| | | ರೀತಿಯ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ ಹಾಗೂ ಅಂತಿಮ ಜೇಷ್ಠತಾ ಪಟ್ಟಿಯನ್ನು ಬಾಕಿಯಿಟ್ಟು ತಾತ್ಕಾಲಿಕ ಪಟ್ಟಿಯ ಆಧಾರದ ಮೇಲೆ ಇತ್ತೀಚೆಗೆ ನಿಯಮ-32ರಲ್ಲಿ ಮುಂಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿಯಲ್ಲಿ ನಿರ್ಣಯಿಸಲಾಗಿರುತ್ತದೆ.<br><br>ಗ್ರೂಪ್ ಬಿ, ಸಿ ಮತ್ತು ಡಿ ವೃಂದಗಳ ಪ್ರಸಕ್ತ ಸಾಲಿನ (2026-27) ರ ಜೇಷ್ಠತಾ ಪಟ್ಟಿಯನ್ನ ಇಲಾಖೆಯ ಅಧಿಕೃತ ಜಾಲತಾಣದಲ್ಲಿ (Department Website) ಅನುಬಂಧದಲ್ಲಿ-1ರಲ್ಲಿ ವಿವರಸಿದಂತೆ ಪ್ರಕಟಿಸಲಾಗಿರುತ್ತದೆ.<br><br>**ಜೇಷ್ಠತಾ ಪಟ್ಟಿಯ ಪ್ರಚೂರಪಡಿಸುವ ಕಾರ್ಯ ನಿರಂತರವಾದದ್ದಾಗಿದ್ದು, ಇನ್ನು ಕೆಲವು ಉಳಿದ ವೃಂದದ ಜೇಷ್ಠತಾ ಪಟ್ಟಿಗಳನ್ನು ಶೀಘ್ರವಾಗಿ ಇಲಾಖೆ ಜಾಲತಾಣದಲ್ಲಿ ಪ್ರಕಟಿಸಲು ಕ್ರಮವಹಿಸಲಾಗುವುದು** |
| 3 | **ಎಲ್ಲಾ ವೃಂದಗಳ ಮುಂಬಡ್ತಿ.::-**<br><br>ಇಲಾಖೆಯ ವೈದ್ಯರು ಹಾಗೂ ಇತರ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿ ಪರಿಷ್ಕರಿಸದೇ ಇರುವುದರಿಂದ ಅರ್ಹತೆ ಹೊಂದಿರುವ ಹಿರಿಯ ವೈದ್ಯರು ಮತ್ತು ಇತರೆ ವೃಂದಗಳ ಅಧಿಕಾರಿ - ನೌಕರರು ಮುಂಬಡ್ತಿ ಹುದ್ದೆಗಳನ್ನು ಪಡೆಯಲು ವಂಚಿತರಾಗಿರುತ್ತಾರೆ ಹಾಗೂ ಯಾವುದೇ ಮುಂಬಡ್ತಿ ಇಲ್ಲದೆ ಹಲವಾರು ನೌಕರರ ವಯೋನಿವೃತ್ತಿ ಹೊಂದಿರುತ್ತಾರೆ. | ಇಲಾಖೆಯಲ್ಲಿ ಈ ಮೊದಲು ಒಂದು ಮುಖ್ಯ ಆಡಳಿತಾದಿಕಾರಿ (CAO) ಹುದ್ದೆ ಇದ್ದು 200 ಕ್ಕೂ ಅಧಿಕ ವೃಂದಗಳ ಎಲ್ಲಾ ರೀತಿಯ ಸೇವಾ ಕಲಸಗಳನ್ನು ನಿರ್ವಹಿಸಲು ಕಷ್ಟಸಾಧ್ಯವಾಗಿದ್ದು ವಿಳಂಬಕ್ಕೆ ಕಾರಣವಾಗಿರುತ್ತಿತ್ತು, ಆ ಕಾರಣದಿಂದಾಗಿ ಹೊಸದಾಗಿ ಸುಮಾರು 09 ತಿಂಗಳ ಹಿಂದೆ ಇನ್ನೊಂದು ಮುಖ್ಯ ಆಡಳಿತಾಧಿಕಾರಿಗಳ ಹುದ್ದೆಯನ್ನು ಸೃಜನ ಮಾಡಲಾಗಿರುತ್ತದೆ. ಪ್ರಸ್ತುತ ಎರಡು ಮುಖ್ಯ ಆಡಳಿತಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು,<br><br>ಈಗಾಗಲೇ 450 ವೈದ್ಯರಿಗೆ ಕಾಲಮಿತಿ ಮುಂಬಡ್ತಿ (Time bond) ನೀಡಲಾಗಿರುತ್ತದ ಹಾಗೂ ಸಿಬ್ಬಂದಿಗಳ ಸೇವಾ ವಿಷಯಕ್ಕೆ ಸಂಬಂಧಿಸಿದ ಕಡತಗಳು ತ್ವರಿತಗತಿಯಲ್ಲಿ ವಿಲೇವಾರಿಯಾಗುತ್ತಿವೆ. ಎಲ್ಲಾ ವೃಂದಗಳಿಗೆ ಪದೋನ್ನತಿ ನೀಡುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಆದಾಗ್ಯೂ ಸರ್ಕಾರದಿಂದ ಕಾಲಕಾಲಕ್ಕೆ **ಕಾರ್ಯನಿರ್ವಾಹಕ ಆದೇಶಗಳ (Executive orders)** ಮೂಲಕ ಸಿಬ್ಬಂದಿಗಳ ಅನುಕೂಲಕ್ಕಾಗಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.<br><br>ದಿನಾಂಕ:06.02.2026 ರಂದು ಆರೋಗ್ಯ ಸುರಕ್ಷಾಧಿಕಾರಿ ಹುದ್ದೆಯಿಂದ ಶುಶ್ರೂಷಾಧಿಕಾರಿ ಹುದ್ದೆಗೆ **ಸಮಾಲೋಚನೆ ನಡೆಸಿ 75 ಸಿಬ್ಬಂದಿಗಳಿಗೆ ಪದೋನ್ನತಿ ನೀಡಲಾಗಿರುತ್ತದೆ.**<br><br>ಈ ಹಿಂದಿನ ಸಾಲುಗಳಲ್ಲಿ ಪದೋನ್ನತಿ ನೀಡಿದ ಮಾಹಿತಿ ಅನುಬಂಧ-2ರಲ್ಲಿ ವಿವರಸಲಾಗಿದೆ.<br><br>ಎಲ್ಲಾ ವೃಂದದ ಸಿಬ್ಬಂದಿಗಳಿಗೆ ಪದೋನ್ನತಿ ನೀಡಲು ಶೀಘ್ರವಾಗಿ ಕ್ರಮವಹಿಸಲಾಗುವುದು.<br><br>ಇಲಾಖೆಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸೇವಾ ವಿವರ ಮಾಹಿತಿ ವ್ಯವಸ್ಥಿತವಾದ ರೀತಿಯಲ್ಲಿ |

| | | |
|---|---|---|
| | | ನಿರ್ವಹಣೆಯಾಗಿರುವುದಿಲ್ಲ. ಇದು ಮಾನವಸಂಪನ್ಮೂಲ ಪ್ರಧಾನ ಇಲಾಖೆಯಾಗಿರುವುದರಿಂದ, ಈ ಎಲ್ಲಾ ಮಾಹಿತಿಗಳ ಗಣಕೀರಕರಣ ಅತೀ ಅವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಇಲಾಖೆಯ ಮಾನವಸಂಪನ್ಮೂಲ ಮಾಹಿತಿಯನ್ನು HRMS-2.0 ತಂತ್ರಾಂಶಕ್ಕೆ ಅಳವಡಿಸಲು ಕ್ರಮತೆಗೆದುಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಸರಿಯಾದ ಮಾಹಿತಿ ಸಮಯಕ್ಕೆ ತಕ್ಕಂತೆ ಲಭ್ಯವಾಗಲಿದೆ. ಈ ಕ್ರಮಗಳಿಂದ ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಲು ಸಾಧ್ಯವಾಗುತ್ತದೆ. |
| 4 | **ಸೇವಾನಿರತ ನೌಕರರ ಉನ್ನತ ವ್ಯಾಸಂಗ. :-**<br><br>ಆರೋಗ್ಯ ಇಲಾಖೆಯಲ್ಲಿ ಸೇವಾನಿರತ ಕೋಟಾದಡಿಯಲ್ಲಿ ಈ ಹಿಂದಿನಿಂದಲೂ ಉನ್ನತ ವ್ಯಾಸಂಗ/ಸ್ನಾತಕೋತ್ತರ ವ್ಯಾಸಂಗಕ್ಕೆ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ವೇತನ, ಶುಲ್ಕ ಹಾಗೂ ಭತ್ಯೆಗಳೊಂದಿಗೆ ನಿಯೋಜನೆ ಮಾಡುವ ನಿಯಮವಿದೆ. ಆದರೆ ಈ ಸಾಲಿನಿಂದ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ನಿಯೋಜನೆಗೊಂಡ ವೈದ್ಯರುಗಳಿಗೆ ವೇತನ, ಶುಲ್ಕ ಹಾಗೂ ಭತ್ಯೆಗಳನ್ನು ನೀಡಿರುವುದಿಲ್ಲ ಹಾಗೂ ಇತರೆ ವೃಂದದ ಸಿಬ್ಬಂದಿಗಳ ಉನ್ನತ ವ್ಯಾಸಂಗದ ನಿಯೋಜನೆಯನ್ನು ಸಂಪೂರ್ಣವಾಗಿ ನಿಲ್ಲಿಸಿರುತ್ತಾರೆ. ಆದರೆ ಸರ್ಕಾರದ ಇತರ ಆರೋಗ್ಯ ಸಂಸ್ಥೆಗಳಾದ ವೈದ್ಯಕೀಯ ಶಿಕ್ಷಣ, ಇಎಸ್ಐ, ಸ್ವಾಯತ್ತ ಸಂಸ್ಥೆಗಳಲ್ಲಿನ ವೈದ್ಯರುಗಳಿಗೆ ಈ ಅವಕಾಶವಿದೆ. ಆಕುಕ ಇಲಾಖೆಯ ವೈದ್ಯರು ಹಾಗೂ ಇಲಾಖೆಯ ಇತರೆ ವೃಂದದ ಸಿಬ್ಬಂದಿಯವರು ಈ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಇದು ನಮ್ಮ ಮೂಲಭೂತ ಹಕ್ಕನ್ನು ಕಸಿದುಕೊಂಡಂತಾಗಿದೆ. | ಯಾವುದೇ ಸರ್ಕಾರಿ ನೌಕರರಿಗೆ ಉನ್ನತ ವ್ಯಾಸಾಂಗಕ್ಕೆ ಸರ್ಕಾರದ ಖರ್ಚಿನಲ್ಲಿ ನಿಯೋಜನೆ ಕೋರುವ ಮೂಲಭೂತ ಹಕ್ಕು ಇರುವುದಿಲ್ಲ. ಸಾರ್ವಜನಿಕರ ಉಪಯೋಗಕ್ಕಾಗಿ ಅದು ಉಪಯುಕ್ತ ಅನಿಸಿದ್ದಲ್ಲಿ ಹಾಗೂ ಮಾನವ ಸಂಪನ್ಮೂಲ ಲಭ್ಯತೆಯ ಮೇಲೆ ಅದು ಸಾಧ್ಯವಿದ್ದಲ್ಲಿ ಸಿಬ್ಬಂದಿಗಳಿಗೆ ಸರ್ಕಾರವು ನಿಯೋಜನೆ ಮೇಲೆ ಉನ್ನತ ವ್ಯಾಸಾಂಗಕ್ಕೆ ಕಳುಹಿಸಲು ತೀರ್ಮಾನಿಸಬಹುದು.<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವೈದ್ಯಕೀಯ ವೃಂದದ ಸ್ನಾತಕೋತ್ತರ (PG) ವಿಧ್ಯಾಭ್ಯಾಸಕ್ಕಾಗಿ ಕರ್ನಾಟಕ ನಾಗರೀಕ ಸೇವಾ ನಿಯಮ KCSR Appendix II ರನ್ವಯ ಸಂಬಂಧಪಟ್ಟ ವೃಂದದ ಮಂಜೂರಾದ ಹುದ್ದೆಗಳ ಶೇ. 5% ರಷ್ಟು ಮೀರದಂತೆ ನಿಯೋಜನೆ ಮಾಡಲಾಗುತ್ತಿದೆ. ಸ್ನಾತಕೋತ್ತರ ವಿದ್ಯಾಭ್ಯಾಸಕ್ಕಾಗಿ ಮಾನ್ಯಗೊಳ್ಳುವ ತಜ್ಞತೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸೇವೆಗೆ ಅವಶ್ಯಕತೆ ಹಾಗೂ ಸೇವಾ ಆದ್ಯತೆಗಳನ್ನು ಆಧರಿಸಿ ಮಾತ್ರ ನಿರ್ಧರಿಸಬೇಕಾಗಿದ್ದು, ವಿಶೇಷವಾಗಿ ದ್ವಿತೀಯ ಮತ್ತು ತೃತೀಯ ಮಟ್ಟದ ಆಸ್ಪತ್ರೆಗಳಲ್ಲಿ ಕೊರತೆ ಗುರುತಿಸಲಾಗಿ ಇಲಾಖೆಗೆ ಅವಶ್ಯಕತೆ ಇರುವ ವಿಷಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ನಿಯೋಜಿಸಲು ಪರಿಗಣಿಸಲಾಗುತ್ತಿದೆ. ಇ.ಎಸ್.ಐ. ಮತ್ತು ಸ್ವಾಯತ್ತ ಸಂಸ್ಥೆಗಳಂತಹ ಬೇರೆ ಇಲಾಖೆಗಳ ಸೇವಾ ಅವಶ್ಯಕತೆಗಳು ಅವರ ಕಾರ್ಯ ಸ್ವರೂಪ, ಪ್ರಕರಣಗಳ ಪ್ರಮಾಣ, ಲಭ್ಯವಿರುವ ಮೂಲ ಸೌಕರ್ಯ, ಹಾಗೂ ಜವಾಬ್ದಾರಿಗಳ ಆಧಾರದ ಮೇಲೆ ಭಿನ್ನವಾಗಿರುತ್ತವೆ ಆದ್ದರಿಂದ ಅನ್ಯ ಸಂಸ್ಥೆಗಳ ತಜ್ಞತೆ ಅವಶ್ಯಕತೆಗಳ ಮಾದರಿಯನ್ನು ಆರೋಗ್ಯ ಮತ್ತು ಕಟುಂಬ ಕಲ್ಯಾಣ ಇಲಾಖೆಗೆ ಯಥಾವತ್ತಾಗಿ ಅನ್ವಯಿಸಲು ಸಾಧ್ಯವಿರುವದಿಲ್ಲ ಏಕೆಂದರೆ ಈ ಇಲಾಖೆಗೆ ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳ ಜನತೆಗೆ ಅಗತ್ಯ ಮತ್ತು ತುರ್ತು ಆರೋಗ್ಯ ಸೇವೆ ಒದಗಿಸುವ ವಿಶೇಷ ಜವಾಬ್ದಾರಿ ಇರುತ್ತದೆ.<br>ಇಲಾಖೆಗೆ ಅವಶ್ಯಕವಲ್ಲದ ತಜ್ಞತೆಗಳಿಗೆ ವೈದ್ಯಾಧಿಕಾರಿಗಳನ್ನು ಸ್ನಾತಕೋತ್ತರ ವಿದ್ಯಾಭ್ಯಾಸಕ್ಕಾಗಿ ನಿಯೋಜಿಸಿದಲ್ಲಿ, ನಿಯೋಜನೆ ಅವಧಿಯಲ್ಲಿ ಗ್ರಾಮೀಣ ಆರೋಗ್ಯ ಸಂಸ್ಥೆಗಳಲ್ಲಿ ತೀವ್ರ ಖಾಲಿ ಹುದ್ದೆಗಳು ಉಂಟಾಗುತ್ತವೆ. ಇದರಿಂದ ಸಾರ್ವಜನಿಕ ಆರೋಗ್ಯ ಸೇವೆಗಳ ನಿರಂತರತೆ ಮತ್ತು ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ |

| | | |
|---|---|---|
| | | ಉಂಟಾಗುತ್ತದೆ. ಹಾಗೆಯೇ ಸ್ನಾತಕೋತ್ತರ ಶಿಕ್ಷಣ ಪೂರ್ಣಗೊಳಿಸಿದ ನಂತರ ಪಡೆದುಕೊಂಡ ತಜ್ಞತೆ ಇಲಾಖೆಯ ಸೇವೆಗೆ ಪೂರಕವಾಗದಿದ್ದಲ್ಲಿ, ಆ ತಜ್ಞ ಸೇವೆಗಳ ಸಮರ್ಪಕ ಬಳಕೆ ಸಾಧ್ಯವಾಗದೇ ಇರುವ ಸಂಭವವಿದೆ. ಹೀಗಾಗಿ ಸ್ನಾತಕೋತ್ತರ ಕೋರ್ಸ್‌ಗಳಿಗೆ ನಿಯೋಜನೆ ನೀಡುವುದು ಇಲಾಖೆಯ ಮಾನವ ಸಂಪನ್ಮೂಲ ಯೋಜನೆಗೆ ಹೊಂದಿಕೊಂಡಂತೆ ಅವಶ್ಯಕತೆಯನ್ನು ಆಧರಿಸಿ ಮತ್ತು ಇಲಾಖೆಯ ವಿಶಿಷ್ಟ ಸೇವಾ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ನಿಯೋಜಿಸುವ ಕಾರ್ಯ ಸರಿಯಾಗಿರುತ್ತದೆ.<br>ಸೇವಾನಿರತ ಕೋಟಾದಡಿಯಲ್ಲಿ ಡಿ.ಎನ್.ಬಿ/ಡಿಪ್ಲೋಮಾ ಸೀಟುಗಳನ್ನು ಇಲಾಖೆಗೆ ಅವಶ್ಯವಿರುವ ತಜ್ಞತೆಯಲ್ಲಿ 50% ರಷ್ಟು ಮೀಸಲಿಡಲಾಗಿರುತ್ತದೆ. ಸದರಿ ಡಿ.ಎನ್.ಬಿ/ಡಿಪ್ಲೋಮಾ ಕೋರ್ಸ್‌ಗಳು ಇಲಾಖೆ ಅಡಿಯಲ್ಲಿನ ಆಸ್ಪತ್ರೆಗಳಲ್ಲಿ ನಡೆಯುವುದರಿಂದ ಅಲ್ಲಿನ ಸಾರ್ವಜನಿಕ ಸೇವೆಗೆ ಹಾಗೂ ಸ್ನಾತಕೋತ್ತರ ವಿದ್ಯಾಭ್ಯಾಸದ ಆಕಾಂಕ್ಷಿಗಳಿಗೆ ಉಪಯೋಗವಾಗುತ್ತದೆ ಆದುದರಿಂದ, ಈ ಕೋರ್ಸ್‌ಗಳಿಗೆ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕಾಗಿ ಇಲಾಖೆಯ ವೈದ್ಯರಿಗೆ ನಿಯೋಜನೆಯ ಆದಾರದ ಮೇಲೆ ಮಂಜೂರು ಮಾಡಲಾಗುತ್ತಿದೆ ಆದರೆ, ಎಂ.ಡಿ./ಎಂ.ಎಸ್. ಕೋರ್ಸ್‌ಗಳು ಇಲಾಖೆಯ ಆಸ್ಪತ್ರೆಯಲ್ಲಿ ಇಲ್ಲದೇ ಇರುವುದರಿಂದ, ಇಲಾಖೆಯ ವೈದ್ಯರಿಗೆ ಈ ಕೋರ್ಸ್‌ಗಳಿಗೆ ಉನ್ನತ ಶಿಕ್ಷಣಕ್ಕೆ ಕಳುಹಿಸಲು KCSR Apendix-2 ನಿಯಮದಂತೆ ಅವರುಗಳ ಹಕ್ಕಿನಲ್ಲಿ ಲಭ್ಯವಿರುವ ರಜೆಗಳ ಆಧಾರದ ಮೇಲೆ ಕಳುಹಿಸಲಾಗುತ್ತಿದೆ ಅಲ್ಲದೇ, ಈಗ ಇಲಾಖೆಯಲ್ಲಿ ವಿಶೇಷ ತಜ್ಞರುಗಳನ್ನು ನೇರ ನೇಮಕಾತಿ ಆಧಾರದ ಮೇಲೆ ಭರ್ತಿ ಮಾಡಲು ಅವಕಾಶವಿರುವುದರಿಂದ, ಇಲಾಖೆಯ ಎಂ.ಬಿ.ಬಿ.ಎಸ್. ವೈದ್ಯರುಗಳಿಗೆ ಸರ್ಕಾರದ ಖರ್ಚಿನಲ್ಲಿ ಮತ್ತು ಸಂಬಳ ಸಹಿತ ಮೂರು ವರ್ಷಕ್ಕೆ ಉನ್ನತ ಶಿಕ್ಷಣಕ್ಕೆ ಕಳುಹಿಸುವ ಅಗತ್ಯತೆಯು ಸಹ ಕಡಿಮೆಯಾಗಿರುತ್ತದೆ |
| 5 | **ವರ್ಗಾವಣೆ ಕಾಯ್ದೆಗೆ ಮಾರ್ಪಾಡು. ::-**<br><br>ವರ್ಗಾವಣೆ ಕಾಯ್ದೆಗೆ ಮಾರ್ಪಾಡುಗಳನ್ನು ಮಾಡುವಂತೆ ಹಲವು ಬಾರಿ ವೈದ್ಯಾಧಿಕಾರಿಗಳ ಸಂಘ ಮತ್ತು ವಿವಿಧ ವೃಂದದ ಕೇಂದ್ರ ಸಂಘವು ಮನವಿ ಸಲ್ಲಿಸಿದ್ದರೂ, ಇದನ್ನು ಪರಿಗಣಿಸದೇ, ಸರ್ಕಾರವು ವರ್ಗಾವಣೆ ಪ್ರಕ್ರಿಯೆಯನ್ನು ವರ್ಷ ಪೂರ್ತಿ ಮಾಡುತ್ತಿದೆ | ವೈದ್ಯಾಧಿಕಾರಿಗಳ ಸಂಘ ಮತ್ತು ವಿವಿಧ ವೃಂದದ ಕೇಂದ್ರ ಸಂಘಗಳೊಂದಿಗೆ ವರ್ಗಾವಣೆ ಕಾಯ್ದೆಗೆ ಮಾರ್ಪಾಡುಗಳನ್ನು ಮಾಡುವ ಕುರಿತಂತೆ ವಿಸ್ತೃತವಾಗಿ ಚರ್ಚೆಯಾಗಿದ್ದು, ವರ್ಗಾವಣೆಯ ಕೌನ್ಸಲಿಂಗ್ ಕಾಯಿದೆಯ ಮಾರ್ಗಸೂಚಿಯ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿರುತ್ತದೆ ಈಗಾಗಲೇ ಸ್ವೀಕರಿಸಿರುವ ಸುಮಾರು ಸಲಹೆಗಳ ಮೇಲೆ ತಾತ್ವಿಕ ಒಪ್ಪಿಗೆ ಇರುತ್ತದೆ. ಮುಂದಿನ ವರ್ಗಾಣೆ counselling ಅವಧಿಯ ಮೊದಲು ನಿಯಮಗಳಲ್ಲಿ ಅಗತ್ಯವಾದ ತಿದ್ದುಪಡಿಗಳನ್ನು ಮಾಡಲಾಗುವುದು.<br><br>ಪ್ರಪ್ರಥಮ ಬಾರಿಗೆ ಕಳೆದ ವರ್ಷ 5700 ವೈದ್ಯರು ಹಾಗೂ ಇತರೆ ಸಿಬ್ಬಂದಿಗಳನ್ನು ಪಾರದರ್ಶಕವಾಗಿ ವರ್ಗಾವಣೆ ಮಾಡಲಾಗಿರುತ್ತದೆ. |
| 6 | **ಜಿಲ್ಲಾಸ್ಪತ್ರೆ / ಸ್ವಾಯತ್ತ ಸಂಸ್ಥೆಗಳ ಹುದ್ದೆಗಳು. ::-** | ವರ್ಗಾವಣೆ ಕಾಯ್ದೆ ಅನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಸ್ಪತ್ರೆಗಳಲ್ಲಿರುವ ಕ್ರಿಟಿಕಲ್ ಖಾಲಿಯಿರುವ (Critical Vacancy) |

| | | |
|---|---|---|
| | ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಹೊಂದಿಕೊಂಡಿರುವ ಜಿಲ್ಲಾ ಆಸ್ಪತ್ರೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎನ್ ಕೇಡಾರ್ ಹುದ್ದೆಗಳಿದ್ದು, ಆ ಹುದ್ದೆಗಳಿಗೆ ಆಕುಕ ಇಲಾಖೆಯಿಂದ ವರ್ಗಾವಣೆ ಮಾಡದೇ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು/ಸಿಬ್ಬಂದಿಗಳನ್ನು ಜಿಲ್ಲಾ ಆಸ್ಪತ್ರೆಗಳಿಂದ ವಾಪಸ್ಸು ಪಡೆಯುತ್ತಿದ್ದಾರೆ. ಇದರಿಂದ ನುರಿತ ಹಿರಿಯ ವೈದ್ಯರು ಹಾಗೂ ಸಿಬ್ಬಂದಿಗಳು ಗ್ರಾಮೀಣ ಮತ್ತು ತಾಲ್ಲೂಕು ಮಟ್ಟಕ್ಕೆ ಮಾತ್ರ ಸೀಮಿತಗೊಂಡು ಜಿಲ್ಲಾ ಮಟ್ಟದಲ್ಲಿ ಸೇವೆ ಸಲ್ಲಿಸುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. | ಹುದ್ದೆಗಳನ್ನು ಆದ್ಯತೆ ಮೇರೆಗೆ ಮೊದಲು ಭರ್ತಿ ಮಾಡುವುದು ಅವಶ್ಯವಿರುತ್ತದೆ. ಸದರಿ ಕಾಯಿದೆ ಪ್ರಕಾರ critical vacancy ಅಂದರೆ, ಮಂಜೂರಾದ ಹುದ್ದೆಗಳಲ್ಲಿ 50 ಪ್ರತಿಶತಕ್ಕಿಂತ ಜಾಸ್ತಿ ಹುದ್ದೆ ಖಾಲಿಯಾಗಿರುವುದು. ಆದರೆ, ಬಹುಪಾಲು ಸಂದರ್ಭದಲ್ಲಿ ಸ್ವಾಯತ್ತ ಸಂಸ್ಥೆಗಳಲ್ಲಿರುವ ಕೆಲವು ಹುದ್ದೆಗಳು ಖಾಲಿಯಿದ್ದರೂ ಅವು 50ಪ್ರತಿಶತಕ್ಕಿಂತ ಜಾಸ್ತಿ ಇಲ್ಲದೇ ಇರುವುದರಿಂದ, Critical Vacancy ಪರಿಭಾಷೆಗೆ ಬಂದಿರುವುದಿಲ್ಲ. ಅದೇ ಪರಿಭಾಷೆಯಂತೆ, ಆಕುಕ ಇಲಾಖೆಯ ಬಹಳಷ್ಟು ಹುದ್ದೆಗಳು ಕ್ರಿಟಿಕಲಿ ಖಾಲಿಯಾಗಿರುವುದರಿಂದ, ಮುಂಬಡ್ತಿ / ವರ್ಗಾವಣೆ ಮೂಲಕ ಇವುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲಾಗುತ್ತಿದೆ. ಈ ಕಾರಣದಿಂದ ಸ್ವಾಯತ್ತ ಸಂಸ್ಥೆಗಳ ಹುದೆಗಳನ್ನು ಖಾಲಿ ಹುದ್ದೆಗಳಿಗೆ ಸಿಬ್ಬಂದಿಗಳನ್ನು ವರ್ಗಾವಣೆ ಮಾಡುವುದಕ್ಕೆ ಹಿಂದಿನ ವರ್ಷದಲ್ಲಿ ಆಗಿರಲಿಲ್ಲ. ಆದರೆ, ಮುಂದಿನ ವರ್ಷಗಳಲ್ಲಿ ಆಕುಕ ಇಲಾಖೆಯ ಕ್ರಿಟಿಕಲ್ ಖಾಲಿಯಿರುವ ಹುದ್ದೆಗಳು ತುಂಬಿದ ನಂತರ ಸ್ವಾಯತ್ತ ಸಂಸ್ತೆ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಾಗುತ್ತದೆ.<br><br>ಅಲ್ಲದೇ, ಸ್ವಾಯತ್ತ ಸಂಸ್ಥೆಗಳಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳ ಪ್ರಕಾರ ಎಲ್ಲಾ ವೃಂದದ ವೈದ್ಯರು ಹಾಗೂ ಸಿಬ್ಬಂದಿಗಳನ್ನು ಗರಿಷ್ಠ 5 ವರ್ಷಗಳ ಕಾಲ ವೈದ್ಯರು/ಸಿಬ್ಬಂದಿಗಳನ್ನು ನಿಯೋಜನೆಗೊಳಿಸಲು ಅವಕಾಶವಿದ್ದು, ಗರಿಷ್ಠ ಅವಧಿ ಪೂರೈಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜನೆಯಿಂದ ಮರಳಿ ಮಾತೃ ಇಲಾಖೆಗೆ ಪಡೆಯುವುದು ಕ್ರಮವಾಗಿದ್ದು. ಈ ಹಿಂದೆ 5 ವರ್ಷ ಪೂರ್ಣಗೊಂಡರೂ ಸಹ ವೈದ್ಯರು/ಸಿಬ್ಬಂದಿಗಳು ನಿಯೋಜನೆ ಸೇವೆಯಿಂದ ಮಾತೃ ಇಲಾಖೆಗೆ ಮರಳದೇ ನಿಯಮಬಾಹೀರವಾಗಿ ಮುಂದುವರೆಯುತ್ತಿದ್ದು, ಅವರುಗಳನ್ನು ಮರಳಿ ಇಲಾಖೆಗೆ ಪಡೆಯುವ ಹಾಗೂ ನಿಯಮಬಾಹಿರವಾಗಿ ಮುಂದುವರೆದಿರುವವರ ವಿರುದ್ಧ ಶಿಸ್ತು ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು, ವೈದ್ಯಕೀಯ ಶಿಕ್ಷಣ ಇಲಾಖೆಯ ವೈದ್ಯಕೀಯ ಕಾಲೇಜು ಇರುವ ಸ್ಥಳಗಳಲ್ಲಿ ನೂತನವಾಗಿ ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಆರೋಗ್ಯ ಇಲಾಖೆಯಿಂದ ನಿರ್ಮಿಸಲು ಕ್ರಮವಹಿಸಲಾಗುತ್ತಿದ್ದು, ಈ ಆಸ್ಪತ್ರೆಗಳಲ್ಲಿ ತಜ್ಞವೈದ್ಯರುಗಳಿಗೆ ಅವಕಾಶ ನೀಡಲಾಗುವುದು. |
| 7 | **ಸಮರ್ಪಕ ಔಷಧಿ ಪೂರೈಕೆ. ::-**<br><br>ಆಸ್ಪತ್ರೆಗಳಲ್ಲಿ ಕಾಲಕಾಲಕ್ಕೆ ಸಮರ್ಪಕವಾದ ಔಷಧಿಗಳನ್ನು | ಒಂದು ಆರೋಪ ರೀತಿಯಲ್ಲಿ ತಿಳಿಸಲಾಗಿರುವ ಈ ವಿಷಯದಲ್ಲಿ ಯಾವುದೇ ಸತ್ಯಾಂಶವಿಲ್ಲ. ಆಕುಕ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯರ ಮತ್ತು ಸಿಬ್ಬಂದಿಗಳ ಸಂಘದವರೇ ಈ ತಪ್ಪು ಮಾಹಿತಿ ಹೇಳುತ್ತಿರುವುದು ಸರಿಯಿರುವುದಿಲ್ಲ. ಬಹಳಷ್ಟು |

| | | |
|---|---|---|
| | ಸರಬರಾಜು ಮಾಡುವುದು ಸರ್ಕಾರದ ಜವಾಬ್ದಾರಿಯಾಗಿದ್ದು, ಈ ಹಿನ್ನಲೆಯಲ್ಲಿ ಸರ್ಕಾರವು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ ಸಂಸ್ಥೆಯನ್ನು ಸ್ಥಾಪಿಸಿರುತ್ತದೆ. ಈ ನಿಗಮದ ಪ್ರಮುಖ ಕರ್ತವ್ಯ ನಿಯಮಿತವಾಗಿ ಅಗತ್ಯಕ್ಕನುಗುಣವಾಗಿ ಔಷಧಿ ಮತ್ತು ವೈದ್ಯಕೀಯ ಸಲಕರಣೆಗಳನ್ನು ಸರಬರಾಜು ಮಾಡುವುದಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಔಷಧಿ ಸರಬರಾಜು ಮಾಡುದರಲ್ಲಿ ಸಂಸ್ಥೆಯು ಸಂಪೂರ್ಣ ವಿಫಲವಾಗಿರುವ ಕಾರಣ ರೋಗಿಗಳು ಸರಿಯಾದ ಸಮಯದಲ್ಲಿ ಔಷದೋಪಚಾರ ದೊರೆಯದೇ ಪರದಾಡುವಂತಾಗಿದೆ ಇದರ ಬಗ್ಗೆ ಸಾಕಷ್ಟು ಬಾರಿ ಸಂಘವು ಮನವಿ ಮಾಡಿದರೂ ಇದುವರೆವಿಗೂ ಸರಿಪಡಿಸಿರುವುದಿಲ್ಲ ಇದರಿಂದ ವೈದ್ಯರು ಮತ್ತು ಸಿಬ್ಬಂದಿಗಳ ಮೇಲೆ ಒತ್ತಡ ಹೆಚ್ಚಾಗುತ್ತಿದ್ದು ರೋಗಿಗಳ ಜೊತೆ ಸಂಘರ್ಷಗಳಿಗೆ ಎಡೆಮಾಡಿಕೊಟ್ಟಿದೆ. ರೋಗಿಗಳಿಗೆ ಸಮರ್ಪಕ ಔಷದೋಪಚಾರವನ್ನು ಮಾಡುವುದು ಕಷ್ಟಕರವಾಗಿರುತ್ತದೆ. ಸರ್ಕಾರವು ಲಭ್ಯವಿರುವ ಅನುದಾನದಲ್ಲಿ ಖರೀದಿಸಲು (ಎ.ಬಿ-ಎಆರ್‌ಕೆ) ತಿಳಿಸಿರುತ್ತಾರೆ. ಆದರೆ ಎ.ಬಿ-ಎಆರ್‌ಕೆ ಅನುದಾನ ತಾತ್ಕಾಲಿಕವಾಗಿ ತುರ್ತು ಸಂದರ್ಭದಲ್ಲಿ ಬಳಸಲು ಅವಕಾಶವಿದೆಯೇ ಹೊರತು ನಿರಂತರವಾಗಿ ಬಳಸಲು ಸಾಧ್ಯವಿಲ್ಲ. ಹಾಗೂ ಎ.ಬಿ-ಎಆರ್‌ಕೆ ಅನುದಾನವನ್ನು ಔಷಧಿ ಹೊರತು ಆಸ್ಪತ್ರೆಯ ಇತರೆ ಅಭಿವೃದ್ಧಿ ಹಾಗೂ ನಿರ್ವಹಣೆ ಕಾರ್ಯಗಳಿಗೂ<br>ಬಳಸಬೇಕಾಗಿರುವುದರಿಂದ ಅನುದಾನದ ಕೊರತೆ ಉಂಟಾಗುತ್ತಿದೆ ಹಾಗೂ ಇತರ ಅಭಿವೃದ್ಧಿ ಕಾರ್ಯ ಕುಂಠಿತವಾಗಿರುತ್ತದೆ. ಇದರಿಂದಾಗಿ ಹಲವಾರು ಆಸ್ಪತ್ರೆಗಳಲ್ಲಿ ಕೋಟ್ಯಾಂತರ ರೂಪಾಯಿ ಪಾವತಿಗೆ ಬಾಕಿ ಇರುತ್ತದೆ | ಸಭೆಗಳಲ್ಲಿ ಈ ಬಗ್ಗೆ ಚರ್ಚಿಸಿದಾಗ ಜಿಲ್ಲೆಯ ಆಸ್ಪತ್ರೆಗಳಲ್ಲಿ ಯಾವುದೇ ರೀತಿಯ ಔಷಧಿಗಳ ಕೊರತೆ ಇರುವ ಬಗ್ಗೆ DHO ರವರು ಸಭೆಯ ಗಮನಕ್ಕೆ ತಂದಿರುವುದಿಲ್ಲ ಹಾಗೂ ಔಷಧ ಕೊರತೆ ಇರುವ ಕುರಿತು ಯಾವುದೇ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ. ಅಂದಾಜು 15 ದಿನಗಳ ಹಿಂದೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ಈ ಹಿಂದೆ ಜರುಗಿದ ಸಭೆಯಲ್ಲಿಯೂ ಸಹ ಯಾವ ಜಿಲ್ಲೆಯಿಂದ ಎಲ್ಲಾ ಜಿಲ್ಲೆಯವರು ಔಷಧಿಗಳ ಕೊರತೆಯಿಲ್ಲ ಎಂದು ದೃಢಪಡಿಸಿರುತ್ತಾರೆ.<br>ಮುಂದುವರೆದು, ಪರಿಶೀಲನಾ ಸಭೆಗಳಿಂದ ಹೊರಬಂದು ವಿಷಯವೇನಂದರೆ ಬಹಳಷ್ಟು ಜಿಲ್ಲೆಗಳಲ್ಲಿ ಸರಿಯಾದ ಸಮಯಕ್ಕೆ ಆರೋಗ್ಯ ಕರ್ನಾಟಕ ಯೋಜನೆಯಡಿಲ್ಲಿ ಬಿಲ್ಲನ್ನು ಸಲ್ಲಿಸಿರುವುದಿಲ್ಲ. ಅಲ್ಲದೇ, ಕೆಲವು ಜಿಲ್ಲೆಗಳಲ್ಲಿ KTTP ಕಾಯ್ದೆಯನ್ನು ಉಲ್ಲಂಘಿಸಿ ಕೃತಕ ರೀತಿಯಲ್ಲಿ ಒಂದು ಲಕ್ಷ ರೂಪಾಯಿಗಳೊಳಗೆ ವಿಭಜನೆ ಮಾಡಿ ಟೆಂಡರ್‌ನ್ನು ಕರೆಯದೇ ಕೊಟೇಷನ್ ಆದಾರದ ಮೇಲೆ ತುಂಬಾ ದುಬಾರಿ ಬೆಲೆಯಲ್ಲಿ ಔಷಧಿಗಳನ್ನು ಖರೀದಿ ಮಾಡುತ್ತಿರುವುದರಿಂದ ಸ್ವಯಂ ನಿರ್ಮಿತ ಹಣಕಾಸಿನ ಕೊರತೆಯ ಪರಿಸ್ಥಿತಿ ಉದ್ಭವಿಸಿರುತ್ತದೆ ಎಂದು ಸಹ ಗಮನಕ್ಕೆ ಬಂದಿರುತ್ತದೆ. ಹಾಗೂ ಸುಮಾರು ಜಿಲ್ಲೆಗಳಲ್ಲಿ ಲಭ್ಯವಿರುವ ಔಷಧಿ ದಾಸ್ತಾನನ್ನು ಕಾಲಕಾಲಕ್ಕೆ ಇ-ಔಷಧಿ ತಂತ್ರಾಂಶದಲ್ಲಿ ಅಳವಡಿಸದೇ ಇರುವುದರಿಂದ ಆಸ್ಪತ್ರೆಗಳಿಗೆ ಸರಿಯಾದ ಸಮಯಕ್ಕೆ ಔಷಧಿ ಸರಬರಾಜು ಮಾಡಲು ಅಡಚಣೆ ಉಂಟಾಗಿರುತ್ತದೆ. ಇದರ ಕುರಿತು ಇಲಾಖೆಯ ಎಲ್ಲಾ ಆಸ್ಪತ್ರೆಯ ಆಡಳಿತಾಧಿಕಾರಿಗಳಾದ ವೈದ್ಯರುಗಳು ಎಚ್ಚರಿಕೆಯಿಂದ ಕೆಲಸ ಮಾಡಿದ್ದಲ್ಲಿ ಔಷಧಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬಹುದಾಗಿದೆ. ಆದುದರಿಂದ, ಈ ವಿಷಯಗಳ ಬಗ್ಗೆ ಸರ್ಕಾರದ ಸೂಕ್ತ ಆದೇಶಗಳನ್ನು ಜಾರಿಗೊಳಿಸಲಾಗಿದೆ ಹಾಗೂ ಮುಂದಿನ ದಿನಗಳಲ್ಲಿ ತಪ್ಪಿತ್ತಸ್ತರ ವಿರುದ್ಧ ಕಠಿಣ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ KTTP ಕಾಯ್ದೆಯ ಉಲ್ಲಂಘನೆ ಹಾಗೂ ದುಬಾರಿ ಬೆಲೆಯಲ್ಲಿ ಔಷಧಿ ಖರೀದಿ ಮಾಡುವವರ ವಿರುದ್ಧ ಸೂಕ್ತ ಕ್ರಿಮಿನಲ್ ಮೊಕ್ಕದ್ದಮೆಯನ್ನು ಸಹ ಹೂಡಲಾಗುವುದು.<br>ಅವಶ್ಯಕ ಔಷಧಗಳನ್ನು ಒದಗಿಸಿಕೊಳ್ಳಲು ಆಯಾ ಆಸ್ಪತ್ರೆಗಳ Ab-ark/Ars ಅಡಿಯಲ್ಲಿ ಅನುದಾನ ಲಭ್ಯವಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಜಿಲ್ಲಾ ಶಸ್ತ್ರ ಚಿಕಿತ್ಸಕರು ಅಗತ್ಯ ಕ್ರಮವಹಿಸಲು ಸೂಚಿಸಲಾಗಿದೆ. |
| 8 | **ಖಾಲಿ ಹುದ್ದೆಗಳ ನೇಮಕಾತಿ. ::-**<br>ಇಲಾಖೆಯಲ್ಲಿರುವ ವೈದ್ಯರು ಹಾಗೂ ಸಿಬ್ಬಂದಿಗಳ ಖಾಲಿ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡಿರುವುದಿಲ್ಲ. | ಆಕುಕ ಇಲಾಖೆಯಲ್ಲಿ ಬಹಳಷ್ಟು ಆರೋಗ್ಯ ಸಂಸ್ಥೆಗಳು ಮಾನದಂಡಕ್ಕಿಂತ ಹೆಚ್ಚು ಮಂಜೂರಾಗಿದ್ದು, ಉದಾಹರಣೆಗೆ ಜನಸಂಖ್ಯೆಗೆ ಹೋಲಿಸಿದಾಗ ರಾಜ್ಯದಲ್ಲಿ ಸುಮಾರು 500ಕ್ಕಿಂತ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹೆಚ್ಚುವರಿಯಾಗಿ ಮಂಜೂರಾಗಿರುತ್ತದೆ. |

| | | |
|---|---|---|
| | **ಆರೋಗ್ಯ ಇಲಾಖೆಯಲ್ಲಿ 1998 ರಲ್ಲಿನ ಅಂಕಿ-ಅಂಶಗಳ ಆಧಾರದ ಮೇಲೆ ಹುದ್ದೆಗಳನ್ನು ಸೃಜಿಸಲಾಗಿತ್ತು. ತದನಂತರ ಜನಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದರೂ ಸಹ ಯಾವುದೇ ಹೊಸ ಹುದ್ದೆಗಳನ್ನು ಇದುವರೆವಿಗೂ ಸೃಜಿಸಿರುವುದಿಲ್ಲ. ಅಲ್ಲದೇ ಈ ಹಿಂದೆ ಸೃಜಿಸಿರುವ ಹುದ್ದೆಗಳಲ್ಲಿ ಶೇಕಡ 40% ಖಾಲಿ ಇದ್ದು, ಇದುವರೆವಿಗೂ ಭರ್ತಿ ಮಾಡಿರುವುದಿಲ್ಲ. ಇದರಿಂದ ವೈದ್ಯರು ಮತ್ತು ಸಿಬ್ಬಂದಿಗಳ ಮೇಲೆ ಅತೀವ ಕೆಲಸದ ಒತ್ತಡ ಉಂಟಾಗುತ್ತಿದೆ. ಆರೋಗ್ಯ ಇಲಾಖೆಯು ಸೇವಾ ಇಲಾಖೆಯಾಗಿದ್ದು, ಸಾರ್ವಜನಿಕರ ಜೊತೆ ನಿರಂತರ ಸಂಪರ್ಕವಿರುವ ಇಲಾಖೆಯಾಗಿದ್ದು, ಕಾಲಕಾಲಕ್ಕೆ ಹುದ್ದೆಗಳನ್ನು ಭರ್ತಿ ಮಾಡಿದರೆ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ನೀಡಬಹುದಾಗಿದೆ.** | ಇದೇ ರೀತಿ ಬಹಳಷ್ಟು ಸಂಸ್ಥೆಗಳಲ್ಲಿ ವೈದ್ಯರಿಗೆ ಹಾಗೂ ಸಿಬ್ಬಂದಿಗಳಿಗೆ ಅಪೇಕ್ಷಿತ ಮಟ್ಟದ ರೋಗಿಗಳ ಸಂಖ್ಯೆ (Patient load) ಇರುವುದಿಲ್ಲ. ಆದುದರಿಂದ, ಬಹಳಷ್ಟು ಹುದ್ದೆಗಳು ಖಾಲಿಯಿದೆ ಎಂದು ಅನಿಸಿದ್ದರೂ ಸಹ ವೈದ್ಯರು ಮತ್ತು ಸಿಬ್ಬಂದಿಗಳನ್ನು ಅಗತ್ಯವಿರುವ ಸಂಸ್ಥೆಗಳಿಗೆ ಸ್ಥಳಾಂತರ (redeploy) ಮಾಡುವ ಅಗತ್ಯತೆಯಿರುತ್ತದೆ. ಈ ಕೆಲಸವನ್ನು ಈಗಾಗಲೇ ಕೆಲವು ಮಟ್ಟಿಗೆ ಅನುಷ್ಠಾನಗೊಳಿಸಲಾಗಿದೆ ಮತ್ತು ಮುಂದಿನ ದಿನಗಳಲ್ಲಿ ಇದನ್ನು ಪೂರ್ಣಗೊಳಿಸಿದ್ದಲ್ಲಿ ಬಹಳಷ್ಟು ಕೊರತೆಯನ್ನು ಇಲಾಖೆಯಲ್ಲಿ ಸಂಪನ್ಮೂಲಗಳಿಂದಲೇ ನಿವಾರಿಸಲು ಸಾಧ್ಯವಿರುತ್ತದೆ.<br>ಈ ಪ್ರಯತ್ನಗಳು ಅಲ್ಲದೇ ಇಲಾಖೆಯಲ್ಲಿ ಇತ್ತೀಚಿನ ಕಳೆದ ಒಂದು ವರ್ಷದ ಅವಧಿಯಲ್ಲಿ ಸುಮಾರು 7ಸಾವಿರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮತೆಗೆದುಕೊಳ್ಳಲಾಗಿದೆ. ಸುಮಾರು 1400 ವೈದ್ಯರುಗಳನ್ನು ಕಡ್ಡಾಯ ವೈದ್ಯಕೀಯ ಸೇವೆ ಕಾಯ್ದೆಯಡಿಯಲ್ಲಿ ಕಾನೂನಿಯಡಿಯಲ್ಲಿ ಸೂಕ್ತ ಬದಲಾವಣೆ ತರುವ ಮುಖಾಂತರ ಯಶಸ್ವಿಯಾಗಿ ಮಾಡಲಾಗಿರುತ್ತದೆ. 80% ಗ್ರೂಪ್-ಡಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆಕುಕ ಇಲಾಖೆಗೆ ಹಣಕಾಸಿನ ಇಲಾಖೆಯಿಂದ ವಿಶೇಷ ಅವಕಾಶ ಕಲ್ಪಿಸಲಾಗಿದೆ.<br><br>ಇಲಾಖೆಯಲ್ಲಿ ಕಲ್ಯಾಣ-ಕರ್ನಾಟಕ ವೃಂದದ 320 ಹಾಗೂ ಮಿಕ್ಕುಳಿದ ವೃಂಗದ 558 ವಿವಿಧ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ರವರು ದಿನಾಂಕ:21.02.2026 ರಂದು ವಿತರಿಸಿರುತ್ತಾರೆ.<br><br>100 ವೈದ್ಯರು ಹಾಗೂ 120 ತಜ್ಞ ವೈದ್ಯರುಗಳ ನೇಮಕಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br><br>ಇಲಾಖೆಯಲ್ಲಿ ಖಾಲಿ ಇರುವ 1205 ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು ಹಾಗೂ 300 ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಅನುಮೋದಿಸಿದ್ದು, ಅದರನ್ವಯ ಶೀಘ್ರವಾಗಿ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿ ಇರುವ 877 ವಿವಿಧ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಅನುಮೋದಿಸಿದ್ದು, ಅದರನ್ವಯ ಶೀಘ್ರವಾಗಿ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಉಳಿದಂತೆ 400 ಫಾರ್ಮಸಿ ಅಧಿಕಾರಿ ಹಾಗೂ 400 ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಆರ್ಥಿಕ ಇಲಾಖೆಯು ಸಹಮತಿಸಿದ್ದು, ಅದರನ್ವಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ / ಜಿಲ್ಲಾ ಶಸ್ತ್ರ ಚಿಕಿತ್ಸಕರುಗಳ ಮುಖಾಂತರ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | ಪ್ರಾಥಮಿಕ ಆರೋಗ್ಯ ಕೇಂದ್ರ / ಸಮುದಾಯ ಆರೋಗ್ಯ ಕೇಂದ್ರ/ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಶುಶ್ರೂಷಾಧಿಕಾರಿಗಳ ಅವಶ್ಯಕತೆಯಿರುವುದರಿಂದ 600 ಶುಶ್ರೂಷಾಧಿಕಾರಿಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ.<br><br>ತಮಿಳುನಾಡು ಮಾದರಿಯಲ್ಲಿ ಹುದ್ದೆಗಳ ನೇಮಕಾತಿಗಾಗಿ ನಿರ್ದೇಶಕರನ್ನು ಹೊಂದಿರುವಂತಹ ನೇಮಕಾತಿ ಮಂಡಳಿಯನ್ನು ರಚಿಸಲು ಪ್ರಸ್ತಾವನೆಯನ್ನು ರೂಪಿಸಲಾಗಿದೆ. |
| 9 | **ಎಂ.ಸಿ.ಹೆಚ್. ತಜ್ಞರ ಮರುಹೊಂದಾಣಿಕೆ.** :- <br><br>ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಸಿಗುವ ನಿಟ್ಟಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಂತ ಹಂತವಾಗಿ ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ. ಇಂತಹ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ MCH ತಜ್ಞ ವೈದ್ಯರುಗಳನ್ನು ಬೇರೆಡೆಗೆ ವರ್ಗಾವಣೆ ಮಾಡಲು ಆದೇಶಿಸಲಾಗಿದೆ. ಇದರಿಂದ ಗ್ರಾಮೀಣ ಭಾಗದ ಗರ್ಭಿಣಿ ಮಹಿಳೆಯರು ಹಾಗೂ ಮಕ್ಕಳು ದೂರದ ತಾಲ್ಲೂಕು/ಜಿಲಾ ಕೇಂದ್ರಕ್ಕೆ ಪ್ರಯಾಣ ಬೆಳೆಸಿ ತಜ್ಞ ವೈದ್ಯರುಗಳ ಸೇವೆಯನ್ನು ಪಡೆಯುವುದು ಕಷ್ಟವಾಗುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ತಾಯಿ ಮರಣ/ಶಿಶು ಮರಣ ಪ್ರಮಾಣ ಹೆಚ್ಚಾಗುವ ಆತಂಕವಿರುತ್ತದೆ ಹಾಗೂ ಇತರೆ ತಜ್ಞ ಸೇವೆಗಳಿಗೂ ತೊಂದರೆಯಾಗಲಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತುತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಸಂಸ್ಥೆಗಳನ್ನು ಮುಚ್ಚುತ್ತಿರುವುದು ಹಾಗೂ ಹುದ್ದೆಗಳನ್ನು ಬೇರೆ ಕಡೆಗೆ ವರ್ಗಾಯಿಸುತ್ತಿರುವುದರಿಂದ ಸ್ಥಳೀಯ ರೋಗಿಗಳು ಪರದಾಡುವಂತಹ ವಾತಾವರಣ ನಿರ್ಮಾಣವಾಗಿದೆ. | ಸದರಿ ತೀರ್ಮಾನವನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಕಳೆದ ವರ್ಷದ ಆಯವ್ಯಯ ಘೋಷಣೆಯಂತೆ ಮಾಡಲಾಗಿದ್ದು ಮತ್ತು ಸರ್ಕಾರದ ಆದೇಶ ಜಾರಿಗೊಳಿಸುವ ಮೊದಲು ಸಚಿವ ಸಂಪುಟದ ಅನುಮೋದನೆಯನ್ನು ಪಡೆಯಲಾಗಿರುತ್ತದೆ.<br><br>ರಾಜ್ಯದಲ್ಲಿ ಆರೋಗ್ಯ ಸೇವೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಉದ್ದೇಶದಿಂದ ಕಡಿಮೆ ಹೆರಿಗೆಗಳಾಗುವ (Low performing) ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ (ಸಿ.ಹೆಚ್.ಸಿ) ಕಾರ್ಯನಿರ್ವಹಿಸುತ್ತಿರುವ ಎಂ.ಸಿ.ಹೆಚ್. ಸೇವೆಗಳು ಅಂದರೆ, ತಾಯಿ ಮತ್ತು ಮಕ್ಕಳಯ ಆರೋಗ್ಯ ಸೇವೆಗಳ ತಜ್ಞರನ್ನು 100 ಹಾಸಿಗೆಗಳ ತಾಲೂಕಾ ಆಸ್ಪತ್ರೆಗಳು ಮತ್ತು ತಿಂಗಳಿಗೆ 30 ಕ್ಕಿಂತ ಹೆಚ್ಚು ಹೆರಿಗೆಗಳಾಗುವ ಉತ್ತಮ ಕಾರ್ಯನಿರ್ವಹಣೆಯ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಮರುಹಂಚಿಕೆ (redeployment) ಮಾಡಲಾಗಿದೆ ಇದರಿಂದ ರಾಜ್ಯದ ಎಲ್ಲಾ ತಾಲ್ಲೂಕಾ ಆಸ್ಪತ್ರೆಗಳಲ್ಲಿ ಎಂ.ಸಿ.ಹೆಚ್. ತಜ್ಞರ ಹಂಚಿಕೆ ಸಮನಾಗಿ ಆಗುತ್ತಿದ್ದು ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಯನ್ನು 24/7 ರೀತಿಯಲ್ಲಿ ಲಭ್ಯವಾಗುವಂತೆ ಖಾತರಿಪಡಿಸಿಕೊಳ್ಳಲು ಸಹಾಯವಾಗಿದೆ. ಸಮುದಾಯ ಆರೋಗ್ಯ ಕೇಂದ್ರಗಳನ್ನು ಸಹ ಹೆಚ್ಚಿನ ಸಂಖ್ಯೆಯ ಎಂ.ಬಿ.ಬಿ.ಎಸ್. ಪದವೀಧರ ವೈದ್ಯರನ್ನು ಕಲ್ಪಿಸುವ ಮುಖಾಂತರ ಸದೃಢಗೊಳಿಸಲಾಗಿದೆ. ಕರ್ನಾಟಕದಲ್ಲಿ ತಾಲೂಕಾ ಆಸ್ಪತ್ರೆಗಳು ರಾಜ್ಯದ ಒಟ್ಟು ಹೆರಿಗೆ ಒತ್ತಡದ ಶೇ 35% ಪಾಲನ್ನು ಹೊರುತ್ತಿವೆ. ಈಗಿರುವ ಮಾನವ ಸಂಪನ್ಮೂಲ ಹಾಗೂ ಎಂ.ಸಿ.ಹೆಚ್. ಹುದ್ದೆಗಳ ತಾರ್ಕಿಕರಣದ ಮೂಲಕ ತಾಲೂಕಾ ಆಸ್ಪತ್ರೆಗಳು 24X7 ವೈದ್ಯಕೀಯ ಸೇವೆಗಳನ್ನು ನಿರಂತರವಾಗಿ ನೀಡುವಂತಾಗುತ್ತದೆ. ಇದರ ಪರಿಣಾಮವಾಗಿ ಹೆರಿಗೆ ನೋವು ಆರಂಭವಾದ ನಂತರ CEmONC (ತುರ್ತು ಪ್ರಸವ ಮತ್ತು ನವಜಾತ ಶಿಶು ಆರೈಕೆ) ಸೇವೆಗಳು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಸುಲಭವಾಗಿ ಲಭ್ಯವಾಗುತ್ತವೆ. ಇದರಿಂದ ಸರ್ವಜನಿಕ ಆರೋಗ್ಯ ಸೇವೆಗಳ ಪ್ರವೇಶಾರ್ಹತೆ ಹೆಚ್ಚುವುದಲ್ಲದೇ ಖಾಸಗಿ ವೆಚ್ಚ ಕಡಿಮೆಯಾಗುತ್ತದೆ, ಜಿಲ್ಲಾ ಆಸ್ಪತ್ರೆಗಳತ್ತ ಅನಗತ್ಯ ರೆಫರಲ್‌ಗಳು ಕಡಿಮೆಯಾಗುತ್ತವೆ, ಸಿಜೇರಿಯನ್ ಹೆರಿಗೆಗಳ ಪ್ರಮಾಣ ಇಳಿಯುತ್ತದೆ. ಹಾಗೂ ತಾಯಿ ಮತ್ತು ಮಗು ಅಸ್ವಸ್ಥತೆ ಹಾಗೂ ಮರಣ ಪ್ರಮಾಣ ಕಡಿಮೆಯಾಗಲು ಸಹಕಾರಿಯಾಗುತ್ತದೆ. ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ತಾಯಿ ಮರಣವನ್ನು ಸುಮಾರು |

| | | |
|---|---|---|
| | | 24% ರಷ್ಟು ಕಡಿಮೆ ಮಾಡಿರುವುದು ಇಲಾಖೆಯ ಸಾಧನೆಯಾಗಿರುತ್ತದೆ. |
| 10 | **ನಿಯೋಜನೆ ಹುದ್ದೆಗಳು ::-**<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೀಮಿತವಾದ ತಾಂತ್ರಿಕ ಹುದ್ದೆಗಳಾದ ರಾಜ್ಯದ ಮಹಾನಗರ ಪಾಲಿಕೆಯ ಕೆಲವು ಹುದ್ದೆಗಳು, ಆಹಾರ ಸುರಕ್ಷತೆ ಮತ್ತು ಗುಣಮಟ್ಟ, ಕರ್ನಾಟಕ ರಾಜ್ಯ ವೈದ್ಯಕೀಯ ಔಷಧ ಸರಬರಾಜು ನಿಗಮದ ವೈದ್ಯರು ಮತ್ತು ಇತರೆ ಸಿಬ್ಬಂದಿಗಳ ಹುದ್ದೆಯನ್ನು ತಾಂತ್ರಿಕ ಜ್ಞಾನದ ಅರಿವಿಲ್ಲದ ಅಧಿಕಾರಿಗಳಿಗೆ ನೀಡಲಾಗಿದ್ದು, ಇದರಿಂದ ಸದರಿ ಸಂಸ್ಥೆಗಳಲ್ಲಿ ಕಾರ್ಯವೈಖರಿ ಸಮರ್ಪಕವಾಗದೇ ಸಾರ್ವಜನಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಆದ್ದರಿಂದ ಈ ಹುದ್ದೆಗಳನ್ನು ಆಕುಕ ಇಲಾಖೆಯ ಅಧಿಕಾರಿ - ನೌಕರರನ್ನೇ ನಿಯೋಜಿಸಬೇಕು ಎಂದು ಸಂಘವು ಆಗ್ರಹಿಸುತ್ತದೆ. | ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ-2006 (FSSA-2006) ರಲ್ಲಿ ಅವಕಾಶ ಕಲ್ಪಿಸಿದಂತೆ FSSAI (Food Safety and Standards Authority of India) ರವರ ಸಹಮತಿಯಂತೆ ಜಿಲ್ಲೆಗಳಲ್ಲಿ Designated officers (ಅಂಕಿತ ಅಧಿಕಾರಿಗಳು) ಪ್ರಭಾರವನ್ನು ಉಪವಿಭಾಗಾಧಿಕಾರಿಗಳಿಗೆ ವಹಿಸಲಾಗಿದೆ. ಉಪವಿಭಾಗಾಧಿಕಾರಿಗಳು Executive Magistrates ಆಗಿರುವುದರಿಂದ, FSSA-2006ರ ಅನ್ವಯ Regulatory ಮತ್ತು Enforcement ಕೆಲಸಗಳಿಗೆ ಅನುಕೂಲವಾಗುತ್ತದೆ. ಮುಂದುವರೆದು, ಆಹಾರ ಸುರಕ್ಷತಾ ಅಧಿಕಾರಿ (ತಾಲ್ಲೂಕು ಮಟ್ಟದ ಅಧಿಕಾರಿ) ಹುದ್ದೆಗಳನ್ನು ಸಧ್ಯಕ್ಕೆ ಆಕುಕ ಇಲಾಖೆಯ ಆರೋಗ್ಯ ನಿರೀಕ್ಷಕರಿಗೆ ಮುಂದುವರೆಸಲಾಗಿದೆ.<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳ ಕೊರತೆ ಹೆಚ್ಚಾಗಿರುವುದರಿಂದ ಆದ್ಯತೆ ಮೇರೆಗೆ ಸಾರ್ವಜನಿಕರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ವೈದ್ಯರನ್ನು ಮತ್ತು ಸಿಬ್ಬಂದಿಗಳನ್ನು ಸಮರ್ಪಕವಾಗಿ ಬಳಕೆ ಮಾಡುವ ನಿಟ್ಟಿನಲ್ಲಿ ಸರ್ಕಾರದ ನೀತಿಗನುಣವಾಗಿ ಸೂಕ್ತ ಆದೇಶಗಳನ್ನು ಮಾಡಲಾಗಿರುತ್ತದೆ. |
| 11 | **ಗುತ್ತಿಗೆ ವೈದ್ಯರು ಹಾಗೂ ನೌಕರರ ಸಮಸ್ಯೆಗಳು. ::-**<br><br>ಮಂಜೂರಾದ ಹುದ್ದೆಗಳಿಗೆ ಗುತ್ತಿಗೆ ವೈದ್ಯರು / ನೌಕರರ ನೇಮಕಾತಿ ಮಾಡಿಕೊಂಡು 3 ವರ್ಷ ಪೂರ್ೈಸಿದ ಗುತ್ತಿಗೆ ವೈದ್ಯರು / ನೌಕರರನ್ನು ಖಾಯಂಗೊಳಿಸಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಸದರಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದ ಗುತ್ತಿಗೆ ವೈದ್ಯರು ಮತ್ತು ನೌಕರರು ಸೇವಾ ಭದ್ರತೆ ಇಲ್ಲದೇ ಅತಂತ್ರ ವಾತಾವರಣದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಈ ಹಿಂದಿನಂತೆ ಗುತ್ತಿಗೆ ವೈದ್ಯರು / ನೌಕರರನ್ನು ಖಾಯಂಗೊಳಿಸುವುದು. ಈಗಾಗಲೇ ಖಾಯಂಗೊಂಡ ಗುತ್ತಿಗೆ ವೈದ್ಯರಿಗೆ ಅವರು ಸಲ್ಲಿಸಿದ ಗುತ್ತಿಗೆ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸುವುದು. ಮುಂದುವರೆದು ನೇರ ನೇಮಕಾತಿ ಪ್ರಕ್ರಿಯೆಯ ಸಂದರ್ಭದಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು / ನೌಕರರು ಈ ಹಿಂದೆ ನೀಡಿದ ಹಾಗೆ ಗುತ್ತಿಗೆ ಸೇವೆಗೆ | ಗುತ್ತಿಗೆ ನೌಕರರನ್ನು ನೇಮಕಾತಿ ಮಾಡಿಕೊಂಡು ಮೂರು ವರ್ಷದ ಪೂರ್ೈಸಿದ ಬಳಿಕ ಖಾಯಂಗೊಳಿಸಲೇ ಬೇಕು ಎಂಬ ಯಾವುದೇ ಸರ್ಕಾರದ ನೀತಿ ಅಥವಾ ನ್ಯಾಯಾಲಯಗಳ ಆದೇಶವಿರುವುದಿಲ್ಲ.<br><br>ಇವರುಗಳನ್ನು ಖಾಯಂಗೊಳಿಸಲು ನೇಮಿಸುವುದು ಸರ್ಕಾರದ ನೀತಿಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಕೇವಲ ಆರೋಗ್ಯ ಇಲಾಖೆ ಮಾತ್ರವಲ್ಲದೇ ರಾಜ್ಯದ ಇತರೆ ಎಲ್ಲಾ ಇಲಾಖೆಗಳಲ್ಲೂ ಕೂಡಾ ಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಎಲ್ಲಾ ಇಲಾಖೆಗಳಿಗೆ ಅನ್ವಯವಾಗುವಂತೆ ಸರ್ಕಾರದ ನೀತಿ ನಿಯಮಗಳನ್ನು ಪಾಲಿಸಲಾಗುತ್ತಿದೆ.<br><br>ಹೀಗಿದ್ದರೂ ಸಹಿತ ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆಯಡಿಯಲ್ಲಿ ಕಾರ್ಯ ನಿರ್ವಹಿಸಿದ ನೌಕರರಿಗೆ ಇಲಾಖೆಯ ವಿಶೇಷ ನೇರ ನೇಮಕಾತಿಯಲ್ಲಿ ವಯಸ್ಸಿನ ಸಡಲಿಕೆ ಮತ್ತು ಕೃಪಾಂಕಗಳನ್ನು (Age relaxation and Weightage) ನೀಡಿ ಕೆಲವು ವಿಶೇಷ ಸಂದರ್ಭಗಳಲ್ಲಿ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಆದರೆ, ಗುತ್ತಿಗೆ ನೌಕರರು ಖಾಯಂಗೊಳಿಸುವುದು ಬಗ್ಗೆ ಕೇಳಲು ಅವರಿಗೆ ಯಾವುದೇ ಮೂಲ ಹಕ್ಕಾಗಿರುವುದಿಲ್ಲ. |

| | | |
|---|---|---|
| | ಕೃಪಾಂಕಗಳನ್ನು (ಪ್ರತಿ ಆರು ತಿಂಗಳ ಸೇವೆಗೆ 2.5% ಅಂಕಗಳು, ಗರಿಷ್ಠ 30% ಅಂಕಗಳವರೆಗೆ) ನೀಡುವಂತೆ ಸಂಘವು ಆಗ್ರಹಿಸುತ್ತದೆ. | |
| 12 | **ಕರ್ತವ್ಯ ಅವಧಿ ನಂತರದ ಖಾಸಗಿ ವೈದ್ಯಕೀಯ ಸೇವೆ. ::-**<br><br>ಸರ್ಕಾರಿ ವೈದ್ಯರುಗಳು ಕರ್ತವ್ಯದ ಅವಧಿಯ ನಂತರ ಖಾಸಗಿ ಸೇವೆಯನ್ನು 1986 ರ ಆದೇಶದನ್ವಯ ನಡೆಸುತ್ತಿದ್ದಾರೆ. ಆದರೆ ಈಗ ಒಳರೋಗಿ/ಹೊರರೋಗಿ ಸೇವೆ ಎಂದು ವರ್ಗೀಕರಿಸಿ ಸರ್ಕಾರಿ ವೈದ್ಯರುಗಳು ಒಳರೋಗಿ ಸೇವೆಯನ್ನು ನೀಡಬಾರದು ಎಂದು ಆದೇಶವನ್ನು ಹೊರಡಿಸಲಾಗಿರುತ್ತದೆ. ಹೋಬಳಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ವೈದ್ಯರನ್ನು ಹೊರತುಪಡಿಸಿ ಬೇರೆ ಖಾಸಗಿ ತಜ್ಞ ವೈದ್ಯರು ಇರುವುದಿಲ್ಲ ಹಾಗೂ ಇದರಿಂದ ನುರಿತ ಶಸ್ತ್ರಚಿಕಿತ್ಸಕರ ಸೇವೆಯಿಂದ ಸಾರ್ವಜನಿಕರು ವಂಚಿತರಾಗುತ್ತಾರೆ (ಆಸ್ಪತ್ರೆಯ ಕರ್ತವ್ಯದ ವೇಳೆಯಲ್ಲಿ ಖಾಸಗಿ ಸೇವೆಯನ್ನು ನೀಡುವಂತ ವೈದ್ಯರಿಗೆ ಸಂಘವು ಯಾವುದೇ ಬೆಂಬಲವನ್ನು ವ್ಯಕ್ತಪಡಿಸುವುದಿಲ್ಲ). ಆದ್ದರಿಂದ ಸದರಿ ಆದೇಶವನ್ನು ಹಿಂಪಡೆಯುವಂತೆ ಸಂಘವು ಆಗ್ರಹಿಸುತ್ತದೆ.<br><br>ಮುಂದುವರೆದು ಆಕುಕ ಇಲಾಖೆಯ ಸಿಬ್ಬಂದಿಗಳಿಗೆ ಇತರೆ ಆರೋಗ್ಯ ಸಂಸ್ಥೆಗಳಾದ ಕೇಂದ್ರ ಆರೋಗ್ಯ ಸೇವೆ/ವೈದ್ಯಕೀಯ ಶಿಕ್ಷಣ ಇಲಾಖೆ/ಕೇಂದ್ರ ಇಎಸ್ಐ ಕಾರ್ಪೊರೇಷನ್ ಸಿಬ್ಬಂದಿಗಳ ವೇತನಕ್ಕೆ ಹೋಲಿಸಿದರೆ ಬಹಳ ವೇತನ ತಾರತಮ್ಯವಿರುವ ಕಾರಣ ಸಂಘವು ಇಲಾಖೆಯ ಎಲ್ಲಾ ವೈದ್ಯರು ಮತ್ತು ಸಿಬ್ಬಂದಿಗಳಿಗೆ ಸಿಜಿಹೆಚ್ಎಸ್ ಮಾದರಿ ವೇತನವನ್ನು ನೀಡಲು ಆಗ್ರಹಿಸುತ್ತದೆ. | ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಾದ ರೋಗಿಗಳಿಗೆ ನಿರಂತರ ಚಿಕಿತ್ಸೆ ಒದಗಿಸುವ ಅಗತ್ಯವಿರುವುದರಿಂದ, ಸರ್ಕಾರದ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾದ ರೋಗಿಗಳಿಗೆ (In-Patients) ಚಿಕಿತ್ಸೆ ನೀಡುವುದು ಅವರ ಸರ್ಕಾರಿ ಸೇವಾ ಕರ್ತವ್ಯಗಳಿಗೆ ಅಡ್ಡಿಯಾಗುವ ಸಾಧ್ಯತೆ ಇರುವ ಕಾರಣ ಹಾಗೂ ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ ವರದಿಯಲ್ಲಿ, ಸಾರ್ವಜನಿಕ ಸೇವೆಗೆ ಪ್ರಥಮ ಆದ್ಯತೆ ನೀಡುವ ದೃಷ್ಟಿಯಿಂದ ಸರ್ಕಾರದ ವೈದ್ಯರ ಖಾಸಗಿ ವೈದ್ಯಕೀಯ ಸೇವೆಯನ್ನು ಅನ್ನು ನಿಯಂತ್ರಿಸಲು ಶಿಫಾರಸು ಮಾಡಿರುವಂತೆ ಸೀಮಿತವಾದ ನಿರ್ಬಂಧವನ್ನು (Conditional restrictions) ವಿಧಿಸಿ ಆದೇಶಿಸಲಾಗಿದೆ.<br><br>ಕರ್ನಾಟಕ ರಾಜ್ಯದ ವೈದ್ಯರುಗಳಿಗೆ ನೆರೆ ಕೆಲವು ರಾಜ್ಯಗಳಿಗೆ ಹೋಲಿಸಿದರೆ ಉತ್ತಮ ವೇತನ ನೀಡಲಾಗುತ್ತಿದೆ ಇತ್ತೀಚೆಗೆ ಜಾರಿಗೊಳಿಸಲಾದ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ವೈದ್ಯರ ವೇತನ ಇನ್ನು ಹೆಚ್ಚಿಸಲಾಗಿದೆ. ವೇತನವಲ್ಲದೇ ಆಕುಕ ಇಲಾಖೆಯ ವೈದ್ಯರುಗಳಿಗೆ ವಿಶೇಷ ಭತ್ಯೆ (Special Allowance) ನೀಡಲಾಗುತ್ತಿದೆ. ಇದು ಅಲ್ಲದೇ, ವೈದ್ಯರು ಮತ್ತು ಸಿಬ್ಬಂದಿಗಳಿಗೆ ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ವಿವಿಧ ವೈದ್ಯಕೀಯ ಕಾರ್ಯವಿಧಾನಗಳನ್ನು ನಡೆಸಲು ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಬಹುಶಃ ಬೇರೆ ಯಾವುದೇ ಸರ್ಕಾರದ ಇಲಾಖೆಯಲ್ಲಿ ಸರ್ಕಾರಿ ಸಿಬ್ಬಂದಿಗಳಿಗೆ ನಿಯಮಿತವಾಗಿ ಕೈಗೊಳ್ಳಬೇಕಾದ ಕರ್ತವ್ಯಗಳನ್ನು ನಿರ್ವಹಿಸಲು ಈ ರೀತಿಯ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿರುವುದಿಲ್ಲ.<br><br>ಮುಂದುವರೆದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸರ್ಕಾರದ ನೀತಿಗಳಿಗೆ ಒಳಪಡುವುದರಿಂದ ವೈದ್ಯರು ಹಾಗೂ ಸಿಬ್ಬಂದಿಗಳ ವೇತನವನ್ನು ಹೆಚ್ಚಳ ಮಾಡಲು ವೇತನ ಆಯೋಗದ ಶಿಫಾರಸ್ಸುಗಳ ಪರಿಷ್ಕರಣೆ ಸಮಯದಲ್ಲಿ ಪ್ರಸ್ತಾವನೆ ಸಲ್ಲಿಸಬಹುದಾಗಿದೆ. |
| 13 | **ವ್ಯತಿರಿಕ್ತ ಆದೇಶಗಳನ್ನು ಹಿಂಪಡೆಯುವುದು. ::-**<br><br>ಇತ್ತೀಚೆಗೆ ಸರ್ಕಾರಿ ವೈದ್ಯರು ಮತ್ತು ಆರೋಗ್ಯ ಇಲಾಖೆಯ ಅಧಿಕಾರಿ ಮತ್ತು | ಸಾರ್ವಜನಿಕ ಸೇವೆಯನ್ನು ಉತ್ತಮ ರೀತಿಯಲ್ಲಿ ಮಾಡಲು, ಗ್ರಾಮೀಣ ಪ್ರದೇಶಗಳಲ್ಲಿಯು ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ವೈದ್ಯರನ್ನು ಮತ್ತು ಸಿಬ್ಬಂದಿಗಳನ್ನು ಸಮರ್ಪಕವಾಗಿ ಬಳಕೆ ಮಾಡುವ ನಿಟ್ಟಿನಲ್ಲಿ ಸರ್ಕಾರದ ನೀತಿಗನುಣವಾಗಿ ತೀರ್ಮಾನಿಸಿದ ಹಿನ್ನಲೆಯಲ್ಲಿ ವಿವಿಧ ಆದೇಶಗಳು ಜಾರಿಯಾಗುತ್ತಿವೆ. |

| | | |
|---|---|---|
| | ಸಿಬ್ಬಂದಿಗಳನ್ನು ಗುರಿಯಾಗಿಸಿಕೊಂಡು ರಾತ್ರೋರಾತ್ರಿ ಏಕಪಕ್ಷೀಯವಾಗಿ ಆದೇಶಗಳನ್ನು ಹೊರಡಿಸುತ್ತಿದೆ. ಇಂತಹ ಆದೇಶಗಳು ಈಗಾಗಲೇ ಒತ್ತಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆರೋಗ್ಯ ಇಲಾಖೆಯ ಸಿಬ್ಬಂದಿಗಳ ಆತ್ಮಸ್ಥೈರ್ಯವನ್ನು ಕುಗ್ಗಿಸಿ, ಆತಂಕದ ವಾತಾವರಣವನ್ನು ಸೃಷ್ಟಿಸಿ, ಕರ್ತವ್ಯದ ಮೇಲೆ ಬಹಳಷ್ಟು ದುಷ್ಪರಿಣಾಮಗಳನ್ನು ಬೀರುತ್ತಿದೆ. ಅದ್ದರಿಂದ ಇಂತಹ ಆದೇಶಗಳನ್ನು ರದ್ದುಪಡಿಸುವುದು. | ಹಾಗೂ ಈ ಆದೇಶಗಳನ್ನು ಜಾರಿ ಮಾಡಲು ಸಂಬಂಧಿಸಿದ competent authority ಅಂದರೆ, ಸಚಿವ ಸಂಪುಟ ಅಥವಾ ಆಕುಕ ಇಲಾಖೆಯ ಸಚಿವರ ಅನುಮೋದನೆಯಂತೆ ಜಾರಿ ಮಾಡಲಾಗುತ್ತಿದೆ. |
| 14 | **ಇಲಾಖೆಯ ಅಧಿಕಾರಿ- ನೌಕರರಿಗೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಪ್ರಶಸ್ತಿ ಪ್ರಧಾನ.::-**<br><br>ರಾಜ್ಯದ ಕೆಲವು ಇಲಾಖೆಗಳಲ್ಲಿ ಉತ್ತಮ ಸೇವೆ ಸಲ್ಲಿಸುವ ಅಧಿಕಾರಿ ನೌಕರರಿಗೆ ಗುರುತಿಸಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಅದರಂತೆ ಆರೋಗ್ಯ ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸುವ ವೈದ್ಯರು ಹಾಗೂ ಅಧಿಕಾರಿ-ನೌಕರರನ್ನು ಗುರುತಿಸಿ ಸರ್ಕಾರವು ಪ್ರಶಸ್ತಿ ನೀಡುವುದು. ಸರ್ಕಾರಿ ವೈದ್ಯರು ಹಾಗೂ ಇತರ ಸಿಬ್ಬಂದಿ ವರ್ಗದವರ ಪರಿಶ್ರಮದ ಫಲವಾಗಿ ದೇಶದಲ್ಲೇ ಕರ್ನಾಟಕ ರಾಜ್ಯವು ಆರೋಗ್ಯ ಸೂಚ್ಯಾಂಕ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ. ಸ್ಮಾಲ್ ಪಾಕ್ಸ್ ಪೋಲಿಯೋ, ಕೋವಿಡ್-೧೯ ನಂತಹ ಮಾರಕ ಖಾಯಿಲೆಗಳನ್ನು ನಿರ್ಮೂಲನೆಗೊಳಿಸಿ, ಕ್ಷಯ ರೋಗ, ಕುಷ್ಠ ರೋಗ ಮತ್ತು ಇತ್ಯಾದಿ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಿ, ನಿರ್ಮೂಲನ ಹಂತಕ್ಕೆ ತರಲಾಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇವೆ. ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಆದೇಶಗಳಿಂದ ಸರ್ಕಾರಿ ವೈದ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ಅನ್ಯಾಯವಾಗುತ್ತಿದ್ದು, ಇದರಿಂದ ಸಾರ್ವಜನಿಕರ ಆರೋಗ್ಯ ಸೇವೆಯ ಮೇಲ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಆದ ಕಾರಣ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ತಾವುಗಳು ಸಭೆಯನ್ನು ಕರೆಸಿ, ನಮ್ಮ ಸಮಸ್ಯೆಗಳನ್ನು ದಿನಾಂಕ 10.03.2026 ರೊಳಗೆ ಇತ್ಯರ್ಥಗೊಳಿಸುವಂತೆ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಮತ್ತು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ | ರಾಜ್ಯ ಸರ್ಕಾರದಿಂದ ಜಿಲ್ಲಾ ಮಟ್ಟ ಮತ್ತು ರಾಜ್ಯ ಮಟ್ಟದಲ್ಲಿ ಪ್ರತಿ ವರ್ಷ ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ನೀಡಲಾಗುತ್ತಿದೆ.<br>ಇದಲ್ಲದೇ ಆರೋಗ್ಯ ಇಲಾಖೆಯಲ್ಲಿ ಸರ್ಕಾರದ ವತಿಯಿಂದ ಅಂದಾಜು ರೂ. 20.00 ಲಕ್ಷ ರೂ ಅನುದಾನದಲ್ಲಿ ಪ್ರತಿ ವರ್ಷ ವೈದ್ಯರ ದಿನಾಚರಣೆಯನ್ನು ಮಾಡಲಾಗುತ್ತಿದ್ದು, ಸದರಿ ದಿನಾಚರಣೆಯಂದು ಉತ್ತಮ ವೈದ್ಯರನ್ನು ಗುರುತಿಸಿ ಪ್ರಶಸ್ತಿ ಪ್ರಧಾನ ಮಾಡಲಾಗುತ್ತಿದೆ.<br><br>ಮುಂದುವರೆದು, ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಸಂಪನ್ಮೂಲಗಳು ಲಭ್ಯವಿದ್ದರೂ ಸಹ ರಾಜ್ಯ ದಕ್ಷಿಣ ಭಾರತದ ರಾಜ್ಯಗಳಲ್ಲಿ ಮುಖ್ಯವಾದ ಮಾನದಂಡಗಳ ಹಿಂದುಳಿದಿದ್ದು. ತಾಯಿ ಮರಣ ದರ 2024ರ ಮಾಹಿತಿಯಂತೆ ನಮ್ಮ ರಾಜ್ಯದಲ್ಲಿ 57 ಇದ್ದು ತಮಿಳುನಾಡಿನಲ್ಲಿ 35 ಇರುತ್ತದೆ. ಇದೇ ರೀತಿ, ಶಿಶು ಮರಣ ದರ 2023ರ ಮಾಹಿತಿಯಂತೆ ನಮ್ಮ ರಾಜ್ಯದಲ್ಲಿ 14 ಇದ್ದು ತಮಿಳುನಾಡಿನಲ್ಲಿ 12 ಇರುತ್ತದೆ. ಲೆಪ್ರಸಿ ಕಾಯಿಲೆಗೆ ಸಂಬಂಧಿಸಿದಂತೆ ಗ್ರೇಡ-2 ಪ್ರಕರಣಗಳು ನಮ್ಮ ರಾಜ್ಯದಲ್ಲಿ ತಮಿಳುನಾಡಿಗೆ ಹೋಲಿಸಿದರ ಅಂದಾಜು 3 ಪಟ್ಟು ಇರುತ್ತದೆ. ಇದು ಪ್ರಕರಣಗಳ inadequate monitoring and follow up ಇಂದ ಆಗಿರುವುದು. Differentiated TB care ನಮ್ಮ ರಾಜ್ಯದಲ್ಲಿ ತಮಿಳುನಾಡಿಗೆ ಹೋಲಿಸಿದರೆ ಅರ್ಧದಷ್ಟು ಮಾತ್ರ ಇರುತ್ತದೆ. ಇದರಿಂದ TB ಕಾಯಿಲೆಯ ತೀವ್ರತೆಯನ್ನು ಗುರುತಿಸಲು ವೈಫಲ್ಯವಾಗುವ ಸಾಧ್ಯತೆ ಇರುತ್ತದೆ.<br><br>ನಮ್ಮ ರಾಜ್ಯ ನಾಗರೀಕರು ಮತ್ತು ಆಡಳಿತ ವ್ಯವಸ್ಥೆಯ ಪ್ರಯತ್ನದಿಂದ ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾದ ಸಾಧನೆಗಳು ಮಾಡಿದ್ದು ಹೆಮ್ಮೆಯ ವಿಷಯವಾಗಿರುತ್ತದೆ. ಆದರೆ, ಈ ಮೇಲೆ ವಿವರಿಸಿದ ವಾಸ್ತವಾಂಶವನ್ನು ಅರಿತು ಸಾರ್ವಜನಿಕರಿಗೆ ಉತ್ತಮ ರೀತಿಯಲ್ಲಿ ಗುಣಮಟ್ಟದ ಆರೋಗ್ಯ ಸೇವೆಯನ್ನು ಒದಗಿಸಲು ವೈದ್ಯರು ಮತ್ತು ಸಿಬ್ಬಂದಿಗಳ ಜವಾಬ್ದಾರಿಯನ್ನು ಅರಿತು |

| | | |
|---|---|---|
| | ಇಲಾಖೆಯ ವಿವಿಧ ವೃಂದಗಳ ಕೇಂದ್ರ ಸಂಘವು ಮನವಿ ಮಾಡುತ್ತದ. | ವೃತ್ತಿಪರತೆಯಿಂದ ಇನ್ನು ಹೆಚ್ಚು ಪ್ರಯತ್ನಶೀಲವಾಗಿ ಕರ್ತವ್ಯ ನಿರ್ವಹಿಸಬೇಕಿರುತ್ತದೆ. |

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯರು ಹಾಗೂ ಇತರೆ ಸಿಬ್ಬಂದಿಗಳು ಸಾರ್ವಜನಿಕ ಆರೋಗ್ಯ ಸೇವೆಯ ನಿರಂತರತೆ ಹಾಗೂ ರೋಗಿಗಳ ಆರೋಗ್ಯ ಕಾಪಾಡುವ ಮಹತ್ವದ ವೃತ್ತಿಪರ ಮತ್ತು ನೈತಿಕ ಜವಾಬ್ದಾರಿಯನ್ನು ಹೊಂದಿರುವುದರಿಂದ, ಸಾಮೂಹಿಕ ಮುಷ್ಕರದಂತಹ ಕ್ರಮಗಳಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುವುದನ್ನು ಮನಗಂಡು ಮುಷ್ಕರದಿಂದ ಹಿಂದೆ ಸರಿದು ತಮ್ಮ ಕರ್ತವ್ಯಗಳನ್ನು ನಿರ್ವಹಿಸಿ ತಮ್ಮ ಬೇಡಿಕೆಗಳು ಮತ್ತು ಸಮಸ್ಯೆಗಳ ಕುರಿತು ಕಾನೂನಿನ ಅಡಿ ಲಭ್ಯವಿರುವ ಮಾರ್ಗಗಳನ್ನು ಬಳಿಸಿ ಬಗೆಹರಿಸುವುದು ಅಗತ್ಯವಾಗಿದ್ದು, ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ಉಂಟಾಗದಂತೆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದೆಂದು ತಿಳಿಸಲಾಗಿದೆ. ಮುಂದುವರೆದು, ಸಿಬ್ಬಂದಿಗಳು ಯಾವುದೇ ರೀತಿಯ ಮುಷ್ಕರ ನಿಮಿತ್ತ ಕೆಲಸದಿಂದ ಗೈರುಹಾಜರಾಗಿದ್ದಲ್ಲಿ ಮತ್ತು ಅದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿದ್ದಲ್ಲಿ ತಪ್ಪಿತಸ್ಥರ ಸಿಬ್ಬಂದಿಗಳ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು.

6 ಪ್ರಿ204 7

**ದಿನಾಂಕ:10.03.2026 ರಂದು ವಿಧಾನ ಸೌಧ, ಕೊಠಡಿ ಸಂಖ್ಯೆ:330 ರಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆ ಹಾಗೂ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉಪಸ್ಥಿತಿಯಲ್ಲಿ ರಾಜ್ಯಾಧ್ಯರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಆರೋಗ್ಯ ಇಲಾಖೆಯ ವಿವಿಧ ವೃಂದದ ಸಂಘಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ನಡವಳಿಗಳು.**

| ಕ್ರ.ಸಂ. | ಬೇಡಿಕೆ | ಭರವಸೆ/ನಿರ್ಣಯ |
|---|---|---|
| 1 | **ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ::-**<br><br>ಸುಮಾರು ವರ್ಷಗಳಿಂದ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿಗಾಗಿ ಹಲವಾರು ಬಾರಿ ಮೌಖಿಕವಾಗಿ ಹಾಗೂ ಲಿಖಿತವಾಗಿ ಮನವಿ ಸಲ್ಲಿಸಿದ್ದರೂ ಇದುವರೆವಿಗೂ ಕಾರ್ಯಗತವಾಗಿಲ್ಲ. | ಎಲ್ಲಾ ವೃಂದದ, ವೃಂದ ಮತ್ತು ನೇಮಕಾತಿ ನಿಯಮಗಳನ್ನು 02 ತಿಂಗಳಲ್ಲಿ ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿಲಾಗುವುದು.<br><br>ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬಡ್ತಿಗೆ ಅಡಚಣೆ ಇರುವ ಹುದ್ದೆಗಳಿಗೆ ಮೊದಲಿನ ಆದ್ಯತೆ ನೀಡಿ ಪ್ರತ್ಯೇಕವಾಗಿ ಕಾನೂನು ರೀತಿಯ Executive order ಹೊರಡಿಸಿಲಾಗುವುದು. |
| 2 | **ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವುದು. ::-**<br><br>ವೈದ್ಯರು ಹಾಗೂ ಇತರ ವೃಂದಗಳ ಜೇಷ್ಠತಾಪಟ್ಟಿ ಪ್ರತಿ ವರ್ಷ ಡಿಸೆಂಬರ್ ಮಾಹೆಯಲ್ಲಿ ಪರಿಷ್ಕರಿಸಬೇಕೆಂಬ ನಿಯಮವಿದ್ದರೂ ಇಲಾಖೆ ಸುಮಾರು 13 ವರ್ಷಗಳಿಂದ ಪರಿಷ್ಕರಿಸಿರುವುದಿಲ್ಲ. ಈ ಕೂಡಲೇ ಪರಿಷ್ಕರಿಸಿ ಪ್ರಚುರ ಪಡಿಸಲು ಸಂಘವು ಆಗ್ರಹಿಸುತ್ತದೆ. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 'ಎ' ವೃಂದದ 20 ವರ್ಷ ಮತ್ತು 13 ವರ್ಷ ಸೇವ ಸಲ್ಲಿಸಿದವರ ತಾತ್ಕಾಲಿಕ/ಅಂತಿಮ ಜೇಷ್ಠತಾ ಪಟ್ಟಿಗಳನ್ನು ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಒಂದು ವಾರದಲ್ಲಿ ಪ್ರಕಟಿಸಲಾಗುವುದು. ಉಳಿಕೆ ವೈದ್ಯಾಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಆಯುಕ್ತರವರ ಕಛೇರಿಯಿಂದ ಸೂಕ್ತ ಮಾಹಿತಿಯೊಂದಿಗೆ ಪ್ರಸ್ತಾವನೆ ಬಂದ ಮೇಲೆ ಪ್ರಕಟಿಸಲು ಕ್ರಮ ತಗೆದುಕೊಳ್ಳಲಾಗುವುದು.<br>ಇತರ ವೃಂದಗಳ ಬಹುತೇಕ ಜೇಷ್ಠತಾ ಪಟ್ಟಿಗಳನ್ನು ಈಗಾಗಲೇ ಪ್ರಕಟಿಸಲಾಗಿದೆ. |
| 3 | **ಎಲ್ಲಾ ವೃಂದಗಳ ಮುಂಬಡ್ತಿ. ::-**<br><br>ಇಲಾಖೆಯ ವೈದ್ಯರು ಹಾಗೂ ಇತರೆ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿ ಪರಿಷ್ಕರಿಸದೇ ಇರುವುದರಿಂದ ಅರ್ಹತೆ ಹೊಂದಿರುವ ಹಿರಿಯ ವೈದ್ಯರು ಮತ್ತು ಇತರ ವೃಂದಗಳ ಅಧಿಕಾರಿ - ನೌಕರರು ಮುಂಬಡ್ತಿ ಹುದ್ದೆಗಳನ್ನು ಪಡೆಯಲು ವಂಚಿತರಾಗಿರುತ್ತಾರೆ ಹಾಗೂ ಯಾವುದೇ ಮುಂಬಡ್ತಿ ಇಲ್ಲದ ಹಲವಾರು ನೌಕರರ ವಯೋನಿವೃತ್ತಿ ಹೊಂದಿರುತ್ತಾರೆ. | 'ಎ' ವೃಂದದ ವೈದ್ಯರುಗಳಿಗೆ ನಿಯಮ 32 ರಲ್ಲಿ ಜಂಟಿ ನಿರ್ದೇಶಕರ ಹಾಗೂ ಅಪರ ನಿರ್ದೇಶಕರ ಹುದ್ದೆಗಳಿಗೆ ಪದೋನ್ನತಿ ನೀಡಲಾಗಿದ್ದು, ಅಂತಿಮ ಜೇಷ್ಠತಾ ಪಟ್ಟಿ ಪ್ರಕಟವಾದ ನಂತರ ಕೆ.ಸಿ.ಎಸ್ ನಿಯಮ 42 ರಲ್ಲಿ ಬಡ್ತಿ ನೀಡಲಾಗುವುದು.<br><br>'ಬಿ', 'ಸಿ' ಮತ್ತು 'ಡಿ' ವೃಂದದ ಪದೋನ್ನತಿ ಪ್ರಕ್ರಿಯೆ ಚಾಲನೆಯಲ್ಲಿದ್ದು, ಉಳಿಕೆ ವೃಂದಗಳ ಮುಂಬಡ್ತಿಯನ್ನು ಮುಂದಿನ 02 ತಿಂಗಳಲ್ಲಿ ಅಂತಿಮಗೊಳಿಸಲಾಗುವುದು. |
| 4 | **ಸೇವಾನಿರತ ನೌಕರರ ಉನ್ನತ ವ್ಯಾಸಂಗ. ::-** | ಎಲ್ಲಾ ವೃಂದಗಳ ಸೇವಾನಿರತ ನೌಕರರ ಉನ್ನತ ವ್ಯಾಸಂಗ ಈ ಹಿಂದಿನಂತೆಯೇ ಆದರೆ, ಆರೋಗ್ಯ |

| | | |
|---|---|---|
| | ಆರೋಗ್ಯ ಇಲಾಖೆಯಲ್ಲಿ ಸೇವಾನಿರತ ಕೋಟಾದಡಿಯಲ್ಲಿ ಈ ಹಿಂದಿನಿಂದಲೂ ಉನ್ನತ ವ್ಯಾಸಂಗ/ಸ್ನಾತಕೋತ್ತರ ವ್ಯಾಸಂಗಕ್ಕೆ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ವೇತನ, ಶುಲ್ಕ ಹಾಗೂ ಭತ್ಯೆಗಳೊಂದಿಗೆ ನಿಯೋಜನೆ ಮಾಡುವ ನಿಯಮವಿದೆ. ಆದರೆ ಈ ಸಾಲಿನಿಂದ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ನಿಯೋಜನೆಗೊಂಡ ವೈದ್ಯರುಗಳಿಗೆ ವೇತನ, ಶುಲ್ಕ ಹಾಗೂ ಭತ್ಯೆಗಳನ್ನು ನೀಡಿರುವುದಿಲ್ಲ. ಹಾಗೂ ಇತರ ವೃಂದದ ಸಿಬ್ಬಂದಿಗಳ ಉನ್ನತ ವ್ಯಾಸಂಗದ ನಿಯೋಜನೆಯನ್ನು ಸಂಪೂರ್ಣವಾಗಿ ನಿಲ್ಲಿಸಿರುತ್ತಾರೆ. ಆದರೆ ಸರ್ಕಾರದ ಇತರ ಆರೋಗ್ಯ ಸಂಸ್ಥೆಗಳಾದ ವೈದ್ಯಕೀಯ ಶಿಕ್ಷಣ, ಇಎಸ್ಐ, ಸ್ವಾಯತ್ತ ಸಂಸ್ಥೆಗಳಲ್ಲಿನ ವೈದ್ಯರುಗಳಿಗೆ ಈ ಅವಕಾಶವಿದೆ. ಆಕುಕ ಇಲಾಖೆಯ ವೈದ್ಯರು ಹಾಗೂ ಇಲಾಖೆಯ ಇತರೆ ವೃಂದದ ಸಿಬ್ಬಂದಿಯವರು ಈ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಇದು ನಮ್ಮ ಮೂಲಭೂತ ಹಕ್ಕನ್ನು ಕಸಿದುಕೊಂಡಂತಾಗಿದೆ. | ಇಲಾಖೆಯ ಅಗತ್ಯತೆಗನುಗುಣವಾಗಿ ಹಾಗೂ ಕಾನೂನಿನ ಪ್ರಕಾರವಾಗಿ ಅನುಮತಿ ನೀಡಲು ಮಾನ್ಯ ಅಧ್ಯಕ್ಷರು ಸೂಚನೆ ನೀಡಿದರು. |
| 5 | **ವರ್ಗಾವಣೆ ಕಾಯ್ದೆಗೆ ಮಾರ್ಪಾಡು. :-**<br><br>ವರ್ಗಾವಣೆ ಕಾಯ್ದೆಗೆ ಮಾರ್ಪಾಡುಗಳನ್ನು ಮಾಡುವಂತೆ ಹಲವು ಬಾರಿ ವೈದ್ಯಾಧಿಕಾರಿಗಳ ಸಂಘ ಮತ್ತು ವಿವಿಧ ವೃಂದದ ಕೇಂದ್ರ ಸಂಘವು ಮನವಿ ಸಲ್ಲಿಸಿದ್ದರೂ, ಇದನ್ನು ಪರಿಗಣಿಸದೇ, ಸರ್ಕಾರವು ವರ್ಗಾವಣೆ ಪ್ರಕ್ರಿಯೆಯನ್ನು ವರ್ಷ ಪೂರ್ತಿ ಮಾಡುತ್ತಿದೆ. | ಮುಂದಿನ ವರ್ಗಾವಣೆ ಪ್ರಕ್ರಿಯೆಯಲ್ಲಿ ಕಳೆದ ವರ್ಷ ಅನುಭವಿಸಿರುವ ಕೆಲವು ಅಡಚಣೆಗಳನ್ನು ಕಾನೂನು ರೀತಿಯಲ್ಲಿ ನಿವಾರಿಸಲು ಪದಾಧಿಕಾರಿಗಳ ಸಲಹೆಯೂ ಪಡೆದು ಅಗತ್ಯವಿರುವ ಸೂಕ್ತ ಮಾರ್ಪಾಡುಗಳನ್ನು ಮಾಡಲಾಗುವುದು.<br><br>ಗ್ರೂಪ್-ಸಿ ಹಾಗೂ ಡಿ ವೃಂದಗಳ ನೌಕರರ ವರ್ಗಾವಣೆಯನ್ನು ಸಾಧ್ಯವಾದಷ್ಟು ಆಯಾ ಜಿಲ್ಲೆಗಳಲ್ಲಿಯೇ/ ಸಮೀಪದ ಜಿಲ್ಲೆಗಳಲ್ಲಿಯೇ ಮಾಡಲು ಮಾನ್ಯ ಅಧ್ಯಕ್ಷರು ಸಲಹ ನೀಡಿದರು. |
| 6 | **ಜಿಲ್ಲಾಸ್ಪತ್ರೆ / ಸ್ವಾಯತ್ತ ಸಂಸ್ಥೆಗಳ ಹುದ್ದೆಗಳು. :-**<br><br>ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಹೊಂದಿಕೊಂಡಿರುವ ಜಿಲ್ಲಾ ಆಸ್ಪತ್ರೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎನ್ ಕೇಡಾರ್ ಹುದ್ದೆಗಳಿದ್ದು, ಆ ಹುದ್ದೆಗಳಿಗೆ ಆಕುಕ ಇಲಾಖೆಯಿಂದ ವರ್ಗಾವಣೆ ಮಾಡದೇ ಹಾಲಿ ಕರ್ತವ್ಯ | ಸ್ವಾಯತ್ತ ಸಂಸ್ಥೆಗಳಲ್ಲಿ ಇವಾಗಲೂ ಆರೋಗ್ಯ ಇಲಾಖೆಯ ಹುದ್ದೆಗಳಿಗೆ ವರ್ಗಾವಣೆ ಹಾಗೂ ಪದೋನ್ನತಿಯ ಸಮಯದಲ್ಲಿ ಕೌನ್ಸಿಲಿಂಗ್ ಮೂಲಕ ನೇಮಿಸಲು ಕ್ರಮ ತಗದುಕೊಳ್ಳಲಾಗುತ್ತಿದ್ದು, ಎಂದು ಆಯುಕ್ತರು ತಿಳಿಸಿದರು. ಅದನ್ನೇ ಮುಂದುವರಸಲಾಗುವುದೆಂದು ಭರವಸೆಯನ್ನು ಸನ್ಮಾನ್ಯ ಆರೋಗ್ಯ ಸಚಿವರು ನೀಡಿದರು.<br><br>ಮಾನ್ಯ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಅಂತಿಮ ತೀರ್ಪಿಗೊಳಪಟ್ಟು ಸೂಕ್ತ |

| | | |
|---|---|---|
| | ನಿರ್ವಹಿಸುತ್ತಿರುವ ವೈದ್ಯರು/ಸಿಬ್ಬಂದಿಗಳನ್ನು ಜಿಲ್ಲಾ ಆಸ್ಪತ್ರೆಗಳಿಂದ ವಾಪಸ್ಸು ಪಡೆಯುತ್ತಿದ್ದಾರೆ. ಇದರಿಂದ ನುರಿತ ಹಿರಿಯ ವೈದ್ಯರು ಹಾಗೂ ಸಿಬ್ಬಂದಿಗಳು ಗ್ರಾಮೀಣ ಮತ್ತು ತಾಲ್ಲೂಕು ಮಟ್ಟಕ್ಕೆ ಮಾತ್ರ ಸೀಮಿತಗೊಂಡು ಜಿಲ್ಲಾ ಮಟ್ಟದಲ್ಲಿ ಸೇವೆ ಸಲ್ಲಿಸುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. | ಕ್ರಮಕೈಗೊಳ್ಳುವುದಾಗಿ ಆಯುಕ್ತರು, ಆರೋಗ್ಯ ಇಲಾಖೆಯವರು ತಿಳಿಸಿದರು. |
| 7 | **ಸಮರ್ಪಕ ಔಷಧಿ ಪೂರೈಕೆ. ::-**<br><br>ಆಸ್ಪತ್ರೆಗಳಲ್ಲಿ ಕಾಲಕಾಲಕ್ಕೆ ಸಮರ್ಪಕವಾದ ಔಷಧಿಗಳನ್ನು ಸರಬರಾಜು ಮಾಡುವುದು ಸರ್ಕಾರದ ಜವಾಬ್ದಾರಿಯಾಗಿದ್ದು, ಈ ಹಿನ್ನಲೆಯಲ್ಲಿ ಸರ್ಕಾರವು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ ಸಂಸ್ಥೆಯನ್ನು ಸ್ಥಾಪಿಸಿರುತ್ತದೆ. ಈ ನಿಗಮದ ಪ್ರಮುಖ ಕರ್ತವ್ಯ ನಿಯಮಿತವಾಗಿ ಅಗತ್ಯಕ್ಕನುಗುಣವಾಗಿ ಔಷಧಿ ಮತ್ತು ವೈದ್ಯಕೀಯ ಸಲಕರಣೆಗಳನ್ನು ಸರಬರಾಜು ಮಾಡುವುದಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಔಷಧಿ ಸರಬರಾಜು ಮಾಡುದರಲ್ಲಿ ಸಂಸ್ಥೆಯು ಸಂಪೂರ್ಣ ವಿಫಲವಾಗಿರುವ ಕಾರಣ ರೋಗಿಗಳು ಸರಿಯಾದ ಸಮಯದಲ್ಲಿ ಔಷದೋಪಚಾರ ದೊರೆಯದೇ ಪರದಾಡುವಂತಾಗಿದೆ. ಇದರ ಬಗ್ಗೆ ಸಾಕಷ್ಟು ಬಾರಿ ಸಂಘವು ಮನವಿ ಮಾಡಿದರೂ ಇದುವರೆವಿಗೂ ಸರಿಪಡಿಸಿರುವುದಿಲ್ಲ. ಇದರಿಂದ ವೈದ್ಯರು ಮತ್ತು ಸಿಬ್ಬಂದಿಗಳ ಮೇಲೆ ಒತ್ತಡ ಹೆಚ್ಚಾಗುತ್ತಿದ್ದು, ರೋಗಿಗಳ ಜೊತೆ ಸಂಘರ್ಷಗಳಿಗೆ ಎಡೆಮಾಡಿಕೊಟ್ಟಿದೆ. ರೋಗಿಗಳಿಗೆ ಸಮರ್ಪಕ ಔಷದೋಪಚಾರವನ್ನು ಮಾಡುವುದು ಕಷ್ಟಕರವಾಗಿರುತ್ತದೆ. ಸರ್ಕಾರವು ಲಭ್ಯವಿರುವ ಅನುದಾನದಲ್ಲಿ ಖರೀದಿಸಲು (ಎ.ಬಿ-ಎಆರ್‌ಕೆ) ತಿಳಿಸಿರುತ್ತಾರೆ. ಆದರೆ ಎ.ಬಿ-ಎಆರ್‌ಕೆ ಅನುದಾನ ತಾತ್ಕಾಲಿಕವಾಗಿ ತುರ್ತು ಸಂದರ್ಭದಲ್ಲಿ ಬಳಸಲು ಅವಕಾಶವಿದೆಯೇ ಹೊರತು ನಿರಂತರವಾಗಿ ಬಳಸಲು ಸಾಧ್ಯವಿಲ್ಲ. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದ್ದು, ಔಷಧಗಳ ಲಭ್ಯತೆಯ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಮಾನ್ಯ ಆರೋಗ್ಯ ಸಚಿವರು ತಿಳಿಸಿದರು.<br><br>ಮುಂದುವರೆದು, ಕೆ.ಎಸ್.ಎಂ.ಎಸ್.ಸಿ.ಎಲ್ ಸಂಸ್ಥೆಯಿಂದ 500 ಕ್ಕೂ ಹೆಚ್ಚು ಔಷಧಿಗಳಿಗೆ ಟೆಂಡರ್ ಕರೆಯಲಾಗಿದೆ. ಹಂತ ಹಂತವಾಗಿ ಉತ್ತಮ ಗುಣಮಟ್ಟದ ಔಷಧಿಗಳನ್ನು ಎಲ್ಲಾ ಆಸ್ಪತ್ರೆಗಳಿಗೆ ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಅಲ್ಲದೇ, ಔಷಧ ಖರೀದಿಗಾಗಿ ಕೆ.ಎಸ್.ಎಂ.ಎಸ್.ಸಿ.ಎಲ್ ಸಂಸ್ಥೆಯಿಂದ ಒಟ್ಟಾರೆ 30 ಕೋಟಿ ರೂಗಳನ್ನು ಆಯಾ ಜಿಲ್ಲೆಗಳಿಗೆ ಇತ್ತೀಚಿಗೆ ಬಿಡುಗಡೆಗೊಳಿಸಲಾಗಿದೆ. |

| | | |
|---|---|---|
| | ಹಾಗೂ ಎ.ಬಿ-ಎಆರ್‌ಕೆ ಅನುದಾನವನ್ನು ಔಷಧಿ ಹೊರತು ಆಸ್ಪತ್ರೆಯ ಇತರ ಅಭಿವೃದ್ಧಿ ಹಾಗೂ ನಿರ್ವಹಣೆ ಕಾರ್ಯಗಳಿಗೂ ಬಳಸಬೇಕಾಗಿರುವುದರಿಂದ ಅನುದಾನದ ಕೊರತೆ ಉಂಟಾಗುತ್ತಿದೆ ಹಾಗೂ ಇತರ ಅಭಿವೃದ್ಧಿ ಕಾರ್ಯ ಕುಂಠಿತವಾಗಿರುತ್ತದೆ. ಇದರಿಂದಾಗಿ ಹಲವಾರು ಆಸ್ಪತ್ರೆಗಳಲ್ಲಿ ಕೋಟ್ಯಾಂತರ ರೂಪಾಯಿ ಪಾವತಿಗೆ ಬಾಕಿ ಇರುತ್ತದೆ | |
| 8 | **ಖಾಲಿ ಹುದ್ದೆಗಳ ನೇಮಕಾತಿ.** ::-<br><br>ಇಲಾಖೆಯಲ್ಲಿರುವ ವೈದ್ಯರು ಹಾಗೂ ಸಿಬ್ಬಂದಿಗಳ ಖಾಲಿ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡಿರುವುದಿಲ್ಲ. ಆರೋಗ್ಯ ಇಲಾಖೆಯಲ್ಲಿ 1998 ರಲ್ಲಿನ ಅಂಕಿ-ಅಂಶಗಳ ಆಧಾರದ ಮೇಲೆ ಹುದ್ದೆಗಳನ್ನು ಸೃಜಿಸಲಾಗಿತ್ತು. ತದನಂತರ ಜನಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದರೂ ಸಹ ಯಾವುದೇ ಹೊಸ ಹುದ್ದೆಗಳನ್ನು ಇದುವರೆವಿಗೂ ಸೃಜಿಸಿರುವುದಿಲ್ಲ. ಅಲ್ಲದೇ ಈ ಹಿಂದೆ ಸೃಜಿಸಿರುವ ಹುದ್ದೆಗಳಲ್ಲಿ ಶೇಕಡ 40% ಖಾಲಿ ಇದ್ದು, ಇದುವರೆವಿಗೂ ಭರ್ತಿ ಮಾಡಿರುವುದಿಲ್ಲ. ಇದರಿಂದ ವೈದ್ಯರು ಮತ್ತು ಸಿಬ್ಬಂದಿಗಳ ಮೇಲೆ ಅತೀವ ಕೆಲಸದ ಒತ್ತಡ ಉಂಟಾಗುತ್ತಿದೆ. ಆರೋಗ್ಯ ಇಲಾಖೆಯು ಸೇವಾ ಇಲಾಖೆಯಾಗಿದ್ದು, ಸಾರ್ವಜನಿಕರ ಜೊತೆ ನಿರಂತರ ಸಂಪರ್ಕವಿರುವ ಇಲಾಖೆಯಾಗಿದ್ದು, ಕಾಲಕಾಲಕ್ಕೆ ಹುದ್ದೆಗಳನ್ನು ಭರ್ತಿ ಮಾಡಿದರೆ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ನೀಡಬಹುದಾಗಿದೆ. | ಈಗಾಗಲೇ ಬಹಳಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ತೀರ ಅಗತ್ಯವಿರುವ ಹುದ್ದೆಗಳನ್ನು ತುಂಬಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಾನ್ಯ ಸಚಿವರು ಸಭೆಗೆ ತಿಳಿಸಿದರು. |
| 9 | **ಎಂ.ಸಿ.ಹೆಚ್. ತಜ್ಞರ ಮರುಹೊಂದಾಣಿಕೆ.** ::-<br><br>ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಸಿಗುವ ನಿಟ್ಟಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಂತ ಹಂತವಾಗಿ ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ. ಇಂತಹ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ MCH ತಜ್ಞ ವೈದ್ಯರುಗಳನ್ನು ಬೇರಡೆಗೆ ವರ್ಗಾವಣೆ ಮಾಡಲು ಆದೇಶಿಸಲಾಗಿದೆ. ಇದರಿಂದ ಗ್ರಾಮೀಣ ಭಾಗದ ಗರ್ಭಿಣಿ | ಸದರಿ ತೀರ್ಮಾನವನ್ನು ಸನ್ಮಾನ್ಯ ಮುಖ್ಯಮಂತ್ರಿಯವರ ಕಳೆದ ವರ್ಷದ ಆಯವ್ಯಯ ಘೋಷಣೆಯಂತೆ ಮಾಡಲಾಗಿದ್ದು ಮತ್ತು ಸರ್ಕಾರದ ಆದೇಶ ಜಾರಿಗೊಳಿಸುವ ಮೊದಲು ಸಚಿವ ಸಂಪುಟದ ಅನುಮೋದನೆಯನ್ನು ಪಡೆಯಲಾಗಿರುತ್ತದೆ.<br><br>ರಾಜ್ಯದಲ್ಲಿ ಆರೋಗ್ಯ ಸೇವೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಉದ್ದೇಶದಿಂದ ಕಡಿಮೆ ಹೆರಿಗೆಗಳಾಗುವ (Low performing) ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ (ಸಿ.ಹೆಚ್.ಸಿ) ಕಾರ್ಯನಿರ್ವಹಿಸುತ್ತಿರುವ ಎಂ.ಸಿ.ಹೆಚ್. ಸೇವೆಗಳು ಅಂದರೆ, ತಾಯಿ ಮತ್ತು ಮಕ್ಕಳಯ ಆರೋಗ್ಯ ಸೇವೆಗಳ ತಜ್ಞರನ್ನು 100 ಹಾಸಿಗೆಗಳ ತಾಲೂಕಾ ಆಸ್ಪತ್ರೆಗಳು ಮತ್ತು ಹೆಚ್ಚು ಹೆರಿಗೆಗಳಾಗುವ ಉತ್ತಮ ಕಾರ್ಯನಿರ್ವಹಣೆಯ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಮರುಹಂಚಿಕೆ (redeployment) ಮಾಡಲಾಗಿದೆ. |

| | | |
|---|---|---|
| | ಮಹಿಳೆಯರು ಹಾಗೂ ಮಕ್ಕಳು ದೂರದ ತಾಲ್ಲೂಕು/ಜಿಲಾ ಕೇಂದ್ರಕ್ಕೆ ಪ್ರಯಾಣ ಬೆಳಸಿ ತಜ್ಞ ವೈದ್ಯರುಗಳ ಸೇವೆಯನ್ನು ಪಡೆಯುವುದು ಕಷ್ಟವಾಗುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ತಾಯಿ ಮರಣ/ಶಿಶು ಮರಣ ಪ್ರಮಾಣ ಹೆಚ್ಚಾಗುವ ಆತಂಕವಿರುತ್ತದೆ ಹಾಗೂ ಇತರ ತಜ್ಞ ಸೇವೆಗಳಿಗೂ ತೊಂದರೆಯಾಗಲಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತುತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಸಂಸ್ಥೆಗಳನ್ನು ಮುಚ್ಚುತ್ತಿರುವುದು ಹಾಗೂ ಹುದ್ದೆಗಳನ್ನು ಬೇರೆ ಕಡೆಗೆ ವರ್ಗಾಯಿಸುತ್ತಿರುವುದರಿಂದ ಸ್ಥಳೀಯ ರೋಗಿಗಳು ಪರದಾಡುವಂತಹ ವಾತಾವರಣ ನಿರ್ಮಾಣವಾಗಿದೆ. | ಇದರಿಂದ ರಾಜ್ಯದ ಎಲ್ಲಾ ತಾಲ್ಲೂಕಾ ಆಸ್ಪತ್ರೆಗಳಲ್ಲಿ ಎಂ.ಸಿ.ಹೆಚ್. ತಜ್ಞರ ಹಂಚಿಕೆ ಸಮನಾಗಿ ಆಗುತ್ತಿದ್ದು, ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಯನ್ನು 24/7 ರೀತಿಯಲ್ಲಿ ಲಭ್ಯವಾಗುವಂತೆ ಖಾತರಿಪಡಿಸಿಕೊಳ್ಳಲು ಸಹಾಯವಾಗಿದೆ.<br>ಸಮುದಾಯ ಆರೋಗ್ಯ ಕೇಂದ್ರಗಳನ್ನು ಸಹ ಹೆಚ್ಚಿನ ಸಂಖ್ಯೆಯ ಎಂ.ಬಿ.ಬಿ.ಎಸ್. ಪದವೀಧರ ವೈದ್ಯರನ್ನು ಕಲ್ಪಿಸುವ ಮುಖಾಂತರ ಸದೃಢಗೊಳಿಸಲಾಗಿದೆ.<br><br>ಹೀಗಾಗಿ ಈ ಸುಧಾರಣಾ ಪ್ರಕ್ರಿಯೆಯನ್ನು ಈಗಾಗಲೇ ಜಾರಿಗೊಳಿಸಿದ್ದು, ಸಾರ್ವಜನಿಕ ಹಿತಾಸಕ್ತಿಯಿಂದ ಕ್ರಮಕೈಗೊಂಡಿರುವುದಾಗಿ ಮಾನ್ಯ ಆರೋಗ್ಯ ಸಚಿವರು ತಿಳಿಸಿದರು. |
| 10 | **ನಿಯೋಜನೆ ಹುದ್ದೆಗಳು ::-**<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೀಮಿತವಾದ ತಾಂತ್ರಿಕ ಹುದ್ದೆಗಳಾದ ರಾಜ್ಯದ ಮಹಾನಗರ ಪಾಲಿಕೆಯ ಕೆಲವು ಹುದ್ದೆಗಳು, ಆಹಾರ ಸುರಕ್ಷತೆ ಮತ್ತು ಗುಣಮಟ್ಟ, ಕರ್ನಾಟಕ ರಾಜ್ಯ ವೈದ್ಯಕೀಯ ಔಷಧ ಸರಬರಾಜು ನಿಗಮದ ವೈದ್ಯರು ಮತ್ತು ಇತರೆ ಸಿಬ್ಬಂದಿಗಳ ಹುದ್ದೆಯನ್ನು ತಾಂತ್ರಿಕ ಜ್ಞಾನದ ಅರಿವಿಲ್ಲದ ಅಧಿಕಾರಿಗಳಿಗೆ ನೀಡಲಾಗಿದ್ದು, ಇದರಿಂದ ಸದರಿ ಸಂಸ್ಥೆಗಳಲ್ಲಿ ಕಾರ್ಯವೈಖರಿ ಸಮರ್ಪಕವಾಗದೇ ಸಾರ್ವಜನಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಆದ್ದರಿಂದ ಈ ಹುದ್ದೆಗಳನ್ನು ಆಕುಕ ಇಲಾಖೆಯ ಅಧಿಕಾರಿ - ನೌಕರರನ್ನೇ ನಿಯೋಜಿಸಬೇಕು ಎಂದು ಸಂಘವು ಆಗ್ರಹಿಸುತ್ತದೆ. | ಅಗತ್ಯತೆಗೆ ತಕ್ಕಂತೆ ನಿಯೋಜನೆ ಹುದ್ದೆಗಳನ್ನು ರದ್ದುಗೊಳಿಸುವ ಅಥವಾ ರಚಿಸುವ ಪ್ರಕ್ರಿಯೆಯು ನಿರಂತರ ಚಾಲ್ತಿಯಲ್ಲಿರುತ್ತದೆ. ಈ ಹಿನ್ನಲೆಯಲ್ಲಿ ಕೆಲವು ಅನುಉಪಯುಕ್ತವಾದ ಅಥವಾ ಪರ್ಯಾಯ ವ್ಯವಸ್ಥೆ ಸಾಧ್ಯವಿರುವ ನಿಯೋಜನೆ ಹುದ್ದೆಗಳನ್ನು ರದ್ದುಪಡಿಸಲಾಗಿದ್ದು, ಆದರೆ, ಅದೇ ರೀತಿಯಲ್ಲಿ ಅಗತ್ಯವಿರುವ ಕಡೆ ಉದಾಹರಣೆಗೆ, GBA ವ್ಯಾಪ್ತಿಯಲ್ಲಿ 30 ಕ್ಕೂ ಹೆಚ್ಚು ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳ ಹುದ್ದೆಯನ್ನು ಸೃಷ್ಟಿಸಲು ಪ್ರಸ್ತಾಪಿಸಲಾಗಿ ಪ್ರಕ್ರಿಯೆ ಜಾರಿಯಲ್ಲಿದೆ. ಅವಶ್ಯಕತೆಗೆ ಅನುಗುಣವಾಗಿ ಇತರ ನಗರಗಳಲ್ಲಿಯೂ ಹುದ್ದೆಗಳನ್ನು ಸೃಜಿಸಲಾಗುವುದು. |
| 11 | **ಗುತ್ತಿಗೆ ವೈದ್ಯರು ಹಾಗೂ ನೌಕರರ ಸಮಸ್ಯೆಗಳು. ::-**<br><br>ಮಂಜೂರಾದ ಹುದ್ದೆಗಳಿಗೆ ಗುತ್ತಿಗೆ ವೈದ್ಯರು / ನೌಕರರ ನೇಮಕಾತಿ ಮಾಡಿಕೊಂಡು 3 ವರ್ಷ ಪೂರೈಸಿದ ಗುತ್ತಿಗೆ ವೈದ್ಯರು / ನೌಕರರನ್ನು ಖಾಯಂಗೊಳಿಸಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಸದರಿ | ಗುತ್ತಿಗೆ ಸಿಬ್ಬಂದಿಗಳನ್ನು ಖಾಯಂಗೊಳಿಸುವುದು ಸರ್ಕಾರದ ನೀತಿಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಕೇವಲ ಆರೋಗ್ಯ ಇಲಾಖೆ ಮಾತ್ರವಲ್ಲದೇ ರಾಜ್ಯದ ಇತರ ಎಲ್ಲಾ ಇಲಾಖೆಗಳಲ್ಲೂ ಕೂಡಾ ಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಎಲ್ಲಾ ಇಲಾಖೆಗಳಿಗೆ ಅನ್ವಯವಾಗುವಂತೆ ಸರ್ಕಾರದ ನೀತಿ ನಿಯಮಗಳನ್ನು ಪಾಲಿಸಲಾಗುತ್ತಿದೆ ಎಂದು ಮಾನ್ಯ ಆರೋಗ್ಯ ಸಚಿವರು ಸಭೆಗೆ ತಿಳಿಸಿದರು.<br><br>ಹೀಗಿದ್ದರೂ ಸಹಿತ ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆಯಡಿಯಲ್ಲಿ ಕಾರ್ಯ ನಿರ್ವಹಿಸಿದ ನೌಕರರಿಗೆ |

| | | |
|---|---|---|
| | ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದ ಗುತ್ತಿಗೆ ವೈದ್ಯರು ಮತ್ತು ನೌಕರರು ಸೇವಾ ಭದ್ರತೆ ಇಲ್ಲದೇ ಅತಂತ್ರ ವಾತಾವರಣದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಈ ಹಿಂದಿನಂತೆ ಗುತ್ತಿಗೆ ವೈದ್ಯರು / ನೌಕರರನ್ನು ಖಾಯಂಗೊಳಿಸುವುದು. ಈಗಾಗಲೇ ಖಾಯಂಗೊಂಡ ಗುತ್ತಿಗೆ ವೈದ್ಯರಿಗೆ ಅವರು ಸಲ್ಲಿಸಿದ ಗುತ್ತಿಗೆ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸುವುದು. ಮುಂದುವರೆದು ನೇರ ನೇಮಕಾತಿ ಪ್ರಕ್ರಿಯೆಯ ಸಂದರ್ಭದಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು / ನೌಕರರು ಈ ಹಿಂದೆ ನೀಡಿದ ಹಾಗೆ ಗುತ್ತಿಗೆ ಸೇವೆಗೆ ಕೃಪಾಂಕಗಳನ್ನು (ಪ್ರತಿ ಆರು ತಿಂಗಳ ಸೇವೆಗೆ 2.5% ಅಂಕಗಳು, ಗರಿಷ್ಠ 30% ಅಂಕಗಳವರೆಗೆ) ನೀಡುವಂತೆ ಸಂಘವು ಆಗ್ರಹಿಸುತ್ತದೆ. | ಇಲಾಖೆಯ ವಿಶೇಷ ನೇರ ನೇಮಕಾತಿಯಲ್ಲಿ ವಯಸ್ಸಿನ ಸಡಲಿಕೆ ಮತ್ತು ಸಮಂಜಸವಾದ ಕೃಪಾಂಕಗಳನ್ನು (Age relaxation and Weightage) ನೀಡಿ ಕೆಲವು ವಿಶೇಷ ಸಂದರ್ಭಗಳಲ್ಲಿ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ ಎಂದು ಮಾನ್ಯ ಆರೋಗ್ಯ ಸಚಿವರು ಸಭೆಗೆ ತಿಳಿಸಿದರು.<br><br>ಮುಂದುವರೆದು, NHM ಗುತ್ತಿಗೆ ನೌಕರರಿಗೆ ಪ್ರತಿ ತಿಂಗಳು ನಿಗದಿತ ಸಮಯದಲ್ಲಿ ವೇತನ ನೀಡಲು ಇರುವ ಅಡಚಣೆಗಳನ್ನು ಸಮರ್ಪಕವಾಗಿ ಪರಿಶೀಲಿಸಿ ಅಗತ್ಯ ಸುಧಾರಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.<br><br>NHM ಸಿಬ್ಬಂದಿಗಳ ವೇತನವನ್ನು ಪ್ರತಿ ವರ್ಷ 5% ಹೆಚ್ಚಿಸಲು ವ್ಯವಸ್ಥೆಯು ಈಗಾಗಲೇ ಚಾಲ್ತಿಯಲ್ಲಿದ್ದು ಎಂದು ಮಾನ್ಯ ಆರೋಗ್ಯ ಸಚಿವರು ತಿಳಿಸಿದರು. |
| 12 | **ಕರ್ತವ್ಯ ಅವಧಿ ನಂತರದ ಖಾಸಗಿ ವೈದ್ಯಕೀಯ ಸೇವೆ. :-**<br><br>ಸರ್ಕಾರಿ ವೈದ್ಯರುಗಳು ಕರ್ತವ್ಯದ ಅವಧಿಯ ನಂತರ ಖಾಸಗಿ ಸೇವೆಯನ್ನು 1986 ರ ಆದೇಶದನ್ವಯ ನಡೆಸುತ್ತಿದ್ದಾರೆ. ಆದರೆ ಈಗ ಒಳರೋಗಿ/ಹೊರರೋಗಿ ಸೇವೆ ಎಂದು ವರ್ಗೀಕರಿಸಿ ಸರ್ಕಾರಿ ವೈದ್ಯರುಗಳು ಒಳರೋಗಿ ಸೇವೆಯನ್ನು ನೀಡಬಾರದು ಎಂದು ಆದೇಶವನ್ನು ಹೊರಡಿಸಲಾಗಿರುತ್ತದೆ. ಹೋಬಳಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ವೈದ್ಯರನ್ನು ಹೊರತುಪಡಿಸಿ ಬೇರೆ ಖಾಸಗಿ ತಜ್ಞ ವೈದ್ಯರು ಇರುವುದಿಲ್ಲ ಹಾಗೂ ಇದರಿಂದ ನುರಿತ ಶಸ್ತ್ರಚಿಕಿತ್ಸಕರ ಸೇವೆಯಿಂದ ಸಾರ್ವಜನಿಕರು ವಂಚಿತರಾಗುತ್ತಾರೆ (ಆಸ್ಪತ್ರೆಯ ಕರ್ತವ್ಯದ ವೇಳೆಯಲ್ಲಿ ಖಾಸಗಿ ಸೇವೆಯನ್ನು ನೀಡುವಂತ ವೈದ್ಯರಿಗೆ ಸಂಘವು ಯಾವುದೇ ಬೆಂಬಲವನ್ನು ವ್ಯಕ್ತಪಡಿಸುವುದಿಲ್ಲ). ಆದ್ದರಿಂದ ಸದರಿ ಆದೇಶವನ್ನು ಹಿಂಪಡೆಯುವಂತೆ ಸಂಘವು ಆಗ್ರಹಿಸುತ್ತದೆ.<br><br>ಮುಂದುವರೆದು ಆಕುಕ ಇಲಾಖೆಯ ಸಿಬ್ಬಂದಿಗಳಿಗೆ ಇತರೆ | ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಾದ ರೋಗಿಗಳಿಗೆ ನಿರಂತರ ಚಿಕಿತ್ಸೆ ಒದಗಿಸುವ ಅಗತ್ಯವಿರುವುದರಿಂದ, ಸರ್ಕಾರದ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾದ ರೋಗಿಗಳಿಗೆ (In-Patients) ಚಿಕಿತ್ಸೆ ನೀಡುವುದಿಂದಾಗಿ ಅವರ ಸರ್ಕಾರಿ ಸೇವಾ ಕರ್ತವ್ಯಗಳಿಗೆ ಅಡ್ಡಿಯಾಗುವ ಸಾಧ್ಯತೆ ಇರುವ ಕಾರಣ ಹಾಗೂ ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ ವರದಿಯಲ್ಲಿ, ಸಾರ್ವಜನಿಕ ಸೇವೆಗೆ ಪ್ರಥಮ ಆದ್ಯತೆ ನೀಡುವ ದೃಷ್ಠಿಯಿಂದ ಸರ್ಕಾರದ ವೈದ್ಯರ ಖಾಸಗಿ ವೈದ್ಯಕೀಯ ಸೇವೆಯನ್ನು ನಿಯಂತ್ರಿಸಲು ಶಿಫಾರಸು ಮಾಡಿರುವಂತೆ ಸೀಮಿತವಾದ ನಿರ್ಭಂದವನ್ನು (Conditional restrictions) ವಿಧಿಸಿ ಆದೇಶಿಸಲಾಗಿದೆ. ಈ ನಿರ್ಧಾರಕ್ಕೆ ಸರ್ಕಾರವು ಬದ್ಧವಾಗಿದೆ ಎಂದು ಆರೋಗ್ಯ ಸಚಿವರು ತಿಳಿಸಿದರು. |

| | | |
|---|---|---|
| | ಆರೋಗ್ಯ ಸಂಸ್ಥೆಗಳಾದ ಕೇಂದ್ರ ಆರೋಗ್ಯ ಸೇವೆ/ವೈದ್ಯಕೀಯ ಶಿಕ್ಷಣ ಇಲಾಖೆ/ಕೇಂದ್ರ ಇಎಸ್ಐ ಕಾರ್ಪೋರೇಷನ್ ಸಿಬ್ಬಂದಿಗಳ ವೇತನಕ್ಕೆ ಹೋಲಿಸಿದರೆ ಬಹಳ ವೇತನ ತಾರತಮ್ಯವಿರುವ ಕಾರಣ ಸಂಘವು ಇಲಾಖೆಯ ಎಲ್ಲಾ ವೈದ್ಯರು ಮತ್ತು ಸಿಬ್ಬಂದಿಗಳಿಗೆ ಸಿಜಿಹೆಚ್ಎಸ್ ಮಾದರಿ ವೇತನವನ್ನು ನೀಡಲು ಆಗ್ರಹಿಸುತ್ತದೆ. | |
| 13 | ತಡೆಯಬಹುದಾದಂತಹ ತಾಯಿ ಮರಣ ಪ್ರಕರಣಗಳನ್ನು ಶೂನ್ಯಕ್ಕೆ ಇಳಿಸಲು ಹಲವು ಇಲಾಖೆಗಳ ಮುಖ್ಯಸ್ಥರುಗಳನ್ನು ಒಳಗೊಂಡ ರಚಿಸಿರುವ ಸಮಿತಿಯಲ್ಲಿ ಕೇವಲ IAS ಅಧಿಕಾರಿಗಳಿದ್ದು, ವೈದ್ಯಕೀಯ/ ತಾಂತ್ರಿಕ ಅರ್ಹತೆ ಹೊಂದಿದವರನ್ನು ಕಡೆಗಣಿಸಲಾಗಿದೆ. ಈ ಸಮಿತಿಗೆ ತಜ್ಞ ವೈದ್ಯರುಗಳನ್ನು ನೇಮಿಸಲು ಆಗ್ರಹಿಸಿದೆ. | ಈ ಸಮಿತಿಯು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಇಲಾಖೆಗಳ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳನ್ನೊಳಗೊಂಡ ಅಂತರ ಇಲಾಖಾ ಉನ್ನತ ಮಟ್ಟದ ಸಮನ್ವಯ ಸಮಿತಿಯಾಗಿರುತ್ತದೆ. ಈ ಸಮಿತಿಯಲ್ಲಿ ಓರ್ವ ನಿವೃತ್ತ ತಜ್ಞ ವೈದ್ಯರನ್ನು/ತಾಂತ್ರಿಕ ಕೌಶಲ್ಯವುಳ್ಳ ವೈದ್ಯರನ್ನು ನೇಮಿಸಲು ಮಾನ್ಯ ಅಧ್ಯಕ್ಷರು ಸಲಹೆ ನೀಡಿದರು. |

| | |
|---|---|
| ಡಾ|| ಹೆಚ್.ಸಿ. ಮಹದೇವಪ್ಪ<br>ಸಮಾಜ ಕಲ್ಯಾಣ ಸಚಿವರು,<br>ಕರ್ನಾಟಕ ಸರ್ಕಾರ | ದಿನೇಶ್ ಗುಂಡೂರಾವ್<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ<br>ಸಚಿವರು,<br>ಕರ್ನಾಟಕ ಸರ್ಕಾರ |